

## ಸರ್ವಮೂಲ ಸಂದೇಶ

**ಆನಂದಚಿತ್ಸದಿತಿಪೂರ್ವಗುಣೈಃ ಸಮಸ್ತೈಃ ಮರ್ತ್ಯಾದಿಭಿರ್ವಿಧಿಪರೈರ್ಭಗವಾನ್ ಕ್ರಮೇಣ।**
**ಧ್ಯಾತೋಽಧಿಕೈರಧಿಗುಣೋಽಧಿಕಮೇವ ಸೌಖ್ಯಂ ಮುಕ್ತೌ ದದಾತಿ ಸತತಂ ಪರಮಸ್ವರೂಪಃ॥**

ಜೀವನಿಂದ ಹಿಡಿದು ಜೀವೋತ್ತಮನಾದ ಚತುರ್ಮುಖನವರೆಗೆ ಎಲ್ಲರೂ ಸರ್ವೋತ್ತಮನಾದ, ಗುಣಪೂರ್ಣನಾದ ಶ್ರೀಹರಿಯಲ್ಲಿ ಆನಂದ–ಜ್ಞಾನ–ನಿರ್ದುಷ್ಟತ್ವ–ಸ್ವಾಮಿತ್ವ ಮೊದಲಾದ ಗುಣಗಳನ್ನು ಅವರವರ ಯೋಗ್ಯತೆಗೆ ಅನುಗುಣವಾಗಿ ಧ್ಯಾನಿಸುತ್ತಾರೆ. ಅವರವರ ಧ್ಯಾನಕ್ಕನುಗುಣವಾಗಿ ತಾರತಮ್ಯದಿಂದ ಕೂಡಿದ ಶಾಶ್ವತ ಸುಖವನ್ನು ಭಗವಂತನು ಕರುಣಿಸುತ್ತಾನೆ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–8 ಸಂಚಿಕೆ–1 ಸರ್ವಧಾರಿ ಸಂ.॥ ಮಾರ್ಗಶಿರ–ಪುಷ್ಯ ಜನವರಿ 2009**

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

**www.livepravachana.com**

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 7 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 9 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 12 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 17 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 19 |
| **ಜೀವನಯಜ್ಞ** | ಶ್ರೀ ಸುನಂದಕೀ | 21 |
| **ಮಾರ್ಕಂಡೇಯಪುರಾಣ** | ವಿ॥ ಅದ್ವೇ ಲಕ್ಷ್ಮೀಶಾಚಾರ್ಯ | 23 |
| **ವಿಷ್ಣುಪುರಾಣ** | ಸ್ಫೂರ್ತಿ | 26 |
| **ಶ್ರೀಮಧ್ವಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 28 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣಾಚಾರ್ಯ | 30 |
| **ಮುದ್ರೆಗಳಲ್ಲಿ ಪುರುಷಾರ್ಥಗಳ ಚಿಂತನೆ** | | 32 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 35 |
| **ವಿಷ್ಣು ಹಾಗೂ ಅವನ ಅಂತರ್ಯಾಮಿತ್ವ, ಸರ್ವಶಬ್ದ ವಾಚ್ಯತ್ವ** | | 37 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**

ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**

ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ

ಶ್ರೀ ಹರ್ಷ ಬೆಂಗಳೂರು

ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು

ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ



| | | | |
|---|---|---|---|
| **ಬಿಡಿ ಪ್ರತಿ** | **: ರೂ. 8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00


ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು

# ಉದ್ಧವಗೀತೆ

-ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ತೇಜಸ್ವೀ ತಪಸಾ ದೀಪ್ತೋ ದುರ್ಧರ್ಷೋರ್ ದೂರಭಾಜನಃ।**
**ಸರ್ವಭಕ್ಷ್ಯೋಪಿ ಯುಕ್ತಾತ್ಮಾ ನಾದತ್ತೇ ಪಾಪಂ ಅಗ್ನಿವತ್॥**

**ತೇಜಸ್ವೀ**

ಅವಧೂತರು ಯದು ಮಹಾರಾಜರಿಗೆ ತನ್ನ ಮುನಿವೃತ್ತಿಗೆ ಬೇಕಾದ ವಿದ್ಯೆಯನ್ನು ಉಪದೇಶಿಸಿದ ಗುರುಗಳನ್ನು ನೆನಪಿಸುತ್ತಾ ಐದನೆಯ ಗುರು "ಅಗ್ನಿ" ಎಂಬುದಾಗಿ ಪರಿಚಯಿಸಿದ್ದಾರೆ. ಅಗ್ನಿಯು ಮೌನವಾಗಿ ಉಪದೇಶಮಾಡಿದರೆ ಅವಧೂತರು ಮನನ ಮಾಡಿ ಆ ವಿದ್ಯೆಯನ್ನು ಸಿದ್ಧಿಸಿಕೊಂಡವರು. ಮನಸ್ಸಿದ್ದರೆ ಮಾರ್ಗ ಎನ್ನುವುದಕ್ಕೆ ಅವಧೂತರೇ ಸಾಕ್ಷಿ. ಗುರುಗಳು ಪಾಠ ಹೇಳಿಲ್ಲ ಎಂದು ದೂರುವ ಶಿಷ್ಯರೇ ಜಾಸ್ತಿ. ಗುರುಗಳು ಸಿಕ್ಕಾಗ ಶಿಷ್ಯರು ಅವರಿಂದ ಪ್ರಯೋಜನವನ್ನು ಪಡೆಯಬೇಕಾದ್ದು ಅವರ ಕರ್ತವ್ಯ. ಹೀಗೆ ಅವಧೂತರು ಮಾತನಾಡದೆ ಇದ್ದ ಗುರುವಾದ ಅಗ್ನಿಯಿಂದ ತನಗೆ ಬೇಕಾದ್ದನ್ನು ಹೀರಿಕೊಂಡು ತಾನು ಬೆಳೆದ ಬಗೆಯನ್ನು ಯದುವಿನ ಜೊತೆಗೆ ಹಂಚಿಕೊಂಡಿದ್ದಾರೆ. ಮುನಿಯಾದವ ತನ್ನ ತೇಜಸ್ಸಿನಿಂದ ಶಿಷ್ಯನ ಅಜ್ಞಾನವನ್ನು ದೂರಿಕರಿಸುವ ಶಕ್ತಿವಂತನಾಗಿರಬೇಕು. ಇದಕ್ಕೆ ಒಳ್ಳೆಯ ಉದಾಹರಣೆ ಅಗ್ನಿ. ಅಗ್ನಿಯು ತೇಜಸ್ವಿಯಾಗಿದ್ದಾನೆ. ಅಂದರೆ ತನ್ನ ತೇಜಸ್ಸಿನಿಂದ ಸುತ್ತಮುತ್ತಲಿನ ಕಗ್ಗತ್ತಲೆಯನ್ನು ಒದ್ದೋಡಿಸುತ್ತದೆ ಅಗ್ನಿ. ಅಗ್ನಿಯ ಸ್ವಭಾವ-ಪ್ರಭಾವ ಅಷ್ಟಿದೆ. ಎಷ್ಟೆಂದರೆ ಅಗ್ನಿ ಇದ್ದರೆ ಸಾಕು. ಅಗ್ನಿಯು ಬಾಯಿಬಿಟ್ಟು ಹೇಳಬೇಕಿಲ್ಲ "ಹೇ! ಕತ್ತಲೆ ನೀನು ಹೊರಟುಹೋಗು" ಎಂದು. ಅಗ್ನಿಯು ಬಂದರೆ ಸಾಕು, ಅಲ್ಲಿಂದ ಕಗ್ಗತ್ತಲೆ ತನ್ನಷ್ಟಕ್ಕೇ ಮಾಯವಾಗುತ್ತದೆ. ಮುನಿಯೂ ಹೀಗಾಗಬೇಕು. ಮುನಿಯ ಸನ್ನಿಧಿಯಿಂದಲೇ ತನ್ನ ಸಮ್ಮುಖದಲ್ಲಿದ್ದವನ ಹೃದಯ ಗುಹೆಯಲ್ಲಿದ್ದ ತಮಸ್ಸು ನಿರ್ಮೂಲನೆಯಾಗುತ್ತೆ. ನಿರ್ಮೂಲನೆಯಾಗಲೂ ಬೇಕು.

**ತಪಸಾ ದೀಪ್ತಃ**

ಬೆಂಕಿಯು ತನ್ನ ಉರಿಯುವ ಜ್ವಾಲೆಯಿಂದ ಅಕ್ಕ-ಪಕ್ಕದ ವಸ್ತುಗಳನ್ನೂ ಕೂಡ ಪ್ರಕಾಶಿಸುವಂತೆ ಮಾಡುತ್ತದೆ. ಮುನಿಗೂ ಇದು ಸಮಾನ. ಮುನಿಯಲ್ಲೂ ತಪಸ್ಸಿದೆ. ಏಕಾದಶೀ, ಶ್ರವಣ, ಶ್ರೀಕೃಷ್ಣಜಯಂತೀ ಮುಂತಾದ ಉಪವಾಸದ ತಪಸ್ಸಿನಿಂದ, ಜಪ-ತಪ-ಅನುಷ್ಠಾನಗಳ ತಪಸ್ಸಿನಿಂದ, ಹಾಗೂ ಪಾಠ-ಪ್ರವಚನಗಳ, ಶ್ರವಣ-ಮನನಗಳ

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ

ತಪಸ್ಸಿನಿಂದ ಯಾವತ್ತೂ ಕೂಡ ಭಗವಂತನ ಜ್ಞಾನದ ಸಾಮರ್ಥ್ಯವುಳ್ಳವನಾಗಿರುತ್ತಾನೆ. ಹೊರಗಿನ ಬೆಂಕಿಯ ದೀಪ್ತಿಗಿಂತ ಈ ಮುನಿಯ ತಪಸ್ಸಿನ ಜ್ಞಾನದ ದೀಪ್ತಿಯ ಶಕ್ತಿ ಅತ್ಯಧಿಕವಾದದ್ದು.

**ದುರ್ಧರ್ಷಃ**

ಅಗ್ನಿಯ ಧರ್ಷಣ ಅಂದರೆ ಬಲಾತ್ಕಾರವನ್ನು ಮಾಡಲು ಯಾರಿಗೂ ಸಾಮರ್ಥ್ಯವಿಲ್ಲ. ಯಾವುದೇವಸ್ತು ಅಗ್ನಿಯ ಸ್ಪರ್ಶದಿಂದ ಭಸ್ಮವಾಗುವುದರಲ್ಲಿ ಯಾರದೂ ತಕರಾರು ಇಲ್ಲ. ಹೀಗಿರುವಾಗ ಅಗ್ನಿಯನ್ನು ಪರಾಭವಗೊಳಿಸುವವನು ಪ್ರಪಂಚದಲ್ಲಿ ಯಾರು ತಾನೇ ಇರಬಲ್ಲ. ಅದೇರೀತಿ ಭಗವಂತನ ಜ್ಞಾನಿಯ ಸಾಮರ್ಥ್ಯವೂ ಕೂಡ. ಭಗವಂತನ ಅನುಗ್ರಹ ಕೃಪಾ-ಕಟಾಕ್ಷಗಳಿಗೆ ಭಾಜನನಾದ ಭಕ್ತ-ಜ್ಞಾನಿಯೂ ಯಾರಿಂದಲೂ ಸೋಲಲು ಸಾಧ್ಯವೇ ಇಲ್ಲ. ಜ್ಞಾನಿ ಸೋಲುವ ಬಗೆಯಾದರೂ ಹೇಗೆ? ಯಾವುದಾದರೊಂದು ವಸ್ತುವಿನ ಆಸೆ ಆಕಾಂಕ್ಷೆಗಳು ಮುನಿಗೆ ಇರುವುದಾಗಿದ್ದರೆ ಮುನಿಯು ಸೋಲುತ್ತಿದ್ದ. ಆ ಆಸೆಯನ್ನು ಈಡೇರಿಸುವುದಕ್ಕಾಗಿ ಕಂಡಕಂಡವರಲ್ಲಿ ಕೈಯೊಡ್ಡಿ, ದೈನ್ಯಾವಸ್ಥೆಯನ್ನು ಅನುಭವಿಸಿ, ಇನ್ನೊಬ್ಬರ ಹಂಗಿಗೆ ಒಳಗಾಗಿ, ಅವರು ಹೇಳಿದ್ದಕ್ಕೆಲ್ಲಾ ಗೋಣಾಡಿಸಿ, ಅವರ ದಾಸಾನುದಾಸನಾಗಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಪರಾಭವಕ್ಕೆ ಒಳಗಾಗುತ್ತಿದ್ದ. ಆದರೆ ಜ್ಞಾನಿಯು ನಿಸ್ಪೃಹನಾದ್ದರಿಂದ ಯಾರ ಮುಂದೆಯೂ ಕೂಡ ಬಾಗಬೇಕಾದ, ಇನ್ನೊಬ್ಬರ ಬಲಾತ್ಕಾರಕ್ಕೆ ಒಳಗಾಗುವ ಅವಕಾಶವೇ ಇರುವುದಿಲ್ಲ.

**ದೂರಭಾಜನಃ**

ಬೆಂಕಿಯ ಹತ್ತಿರ ಸುಳಿಯಬಾರದಂತೆ. ಬೆಂಕಿಯ ಹತ್ತಿರ ಸುಳಿದರೆ ಸುಟ್ಟು ಕರಕಲಾಗಬೇಕಾದೀತು. ದೀಪದ ಬಣ್ಣಕ್ಕೆ ಮರುಳಾದ ಹಾತೆ-ಮಿಡತೆಗಳ ಪಾಡು ಯಾರಿಗೂ ಬೇಡವಾದುದು. ಅದಕ್ಕೆ ಬೆಂಕಿಯಿಂದ ದೂರ ಇರಬೇಕು. ಬೆಂಕಿಯಂತೆ ಜ್ಞಾನಿಯೂ ಕೂಡ ದೂರಭಾಜನ. ದೂರದಿಂದಲೇ ಆರಾಧಿಸಲ್ಪಡಬೇಕಾದವ. ಜ್ಞಾನಿಗಳ ಜೊತೆ ಕೂಡುವುದು, ಮಾತನಾಡುವುದು, ಮಲಗುವುದು ಎಲ್ಲಾ ಅಗ್ನಿಗೆ ಮೈಒಡ್ಡಿದಂತೆ. ಬೆಂಕಿಯ ಹತ್ತಿರನೂ ಇರಬಾರದು, ಅದೇ ರೀತಿ ಬೆಂಕಿಯಿಂದ ಅತ್ಯಂತ ದೂರವೂ ಇರಬಾರದು. ಬೆಂಕಿಯ ಲಾಭ ಲಭಿಸದು. ಬೆಂಕಿಯ ಬಿಸಿ ಮುಟ್ಟಿ ಪಾಕ ಪಕ್ವವಾಗಬೇಕಾದರೆ ದೂರ ಇದ್ದರೆ ಹೇಗೆ ಸಾಧ್ಯ. ಅದಕ್ಕೆ ಹೇಳಿದ್ದು **ಭಾಜನಃ**. ಬೆಂಕಿಯಂತೆ ಮುನಿಯೂ ಕೂಡ ಭಜಿಸಲ್ಪಡಬೇಕಾದವನು. ಅವನನ್ನು ಆರಾಧಿಸಿದರೇ ಮಾತ್ರ ಇಷ್ಟಾರ್ಥ ಲಭಿಸುವುದು. ಅದಕ್ಕೆ ಹೇಳಿದ್ದು **ಅತ್ಯಾಸನ್ನಾಃ ವಿನಾಶಾಯ ದೂರಸ್ಥಾಃ ನ ಫಲಪ್ರದಾಃ। ಮಧ್ಯಭಾಗೇನ ಸೇವ್ಯಂತಾಂ ರಾಜಾ ವಹ್ನಿಃ ಗುರುಃ ತ್ರಯಃ॥**

---

**ಇದು ವೇದ-ಮಹಾಭಾರತ ಮುಂತಾದ ಇತಿಹಾಸ-ಪುರಾಣಗಳ ಸಾರ.**

**ವಿದ್ವತ್ ಪ್ರಪಂಚ**



# ಗೀತಾಮೃತ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಉಭಯ ಸೇನೆಗಳ ಮಧ್ಯದಲ್ಲಿ ದುಃಖವಿಷಣ್ಣನಾಗಿ, ನಿರಾಯುಧನಾಗಿ ಮುಂದೇನು ಮಾಡಬೇಕೆಂದು ತಿಳಿಯದೆ ಗೊಂದಲಗೊಂಡ ಅರ್ಜುನನನ್ನು ಕುರಿತು ಶ್ರೀಕೃಷ್ಣನು ಉಪದೇಶವನ್ನು ಮಾಡಿದನು. ಈ ಉಪದೇಶದ ವಿಷಯದಲ್ಲಿ ಕೆಲವರು ಹಲವು ಬಗೆಯ ಆಕ್ಷೇಪಗಳನ್ನು ಮಾಡುತ್ತಾರೆ. ಏನೆಂದರೆ–ಯುದ್ಧ ಭೂಮಿಯಲ್ಲಿ ಪ್ರಸಕ್ತವಾದದ್ದು ಯುದ್ಧ ಮಾಡಬೇಕೋ ಬೇಡವೋ ಎಂಬ ಗೊಂದಲ ಅದರ ಪರಿಹಾರಕ್ಕಾಗಿ ಶ್ರೀಕೃಷ್ಣನು ಯುದ್ಧ ಮಾಡು ಅಥವಾ ಯುದ್ಧ ಮಾಡಬೇಡ ಎಂಬುದನ್ನು ಹೇಳಬೇಕೇ ಹೊರತು ಜೀವ–ಪರಮಾತ್ಮ ತತ್ವದ ವೇದಾಂತ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಉಪದೇಶಕ್ಕೆ ಪ್ರಸಕ್ತಿ ಇಲ್ಲ. ಆದ್ದರಿಂದ ಜೀವ–ಪರಮಾತ್ಮ ವಿಷಯಕ್ಕೆ ಸಂಬಂಧಿಸಿದ ಶ್ಲೋಕಗಳು ಶ್ರೀಕೃಷ್ಣನ ಉಪದೇಶರೂಪವಾದ ಗೀತೆಯಲ್ಲಿವೆ. ಅವು ಪ್ರಕ್ಷಿಪ್ತ ಭಾಗವು ಎಂದು ಕೆಲವರು ಆಕ್ಷೇಪಿಸುತ್ತಾರೆ.

ಈ ಆಕ್ಷೇಪಕ್ಕೆ ಶ್ರೀಮಧ್ವಾಚಾರ್ಯರು ತಮ್ಮ **ಗೀತಾತಾತ್ಪರ್ಯ** ಎಂಬ ಗ್ರಂಥದಲ್ಲಿ ಸೂಕ್ತವಾದ ಪರಿಹಾರವನ್ನು ತಿಳಿಸಿದ್ದಾರೆ. ಪ್ರತಿಯೊಬ್ಬನಿಗೂ ತನ್ನ ವರ್ಣಾಶ್ರಮಕ್ಕೆ ಉಚಿತವಾದ ಕರ್ಮಗಳನ್ನು ಭಗವದಾರಾಧನಾ ಬುದ್ಧಿಯಿಂದ ಭಕ್ತಿಪೂರ್ವಕವಾಗಿ ಮಾಡುವುದೇ ಶ್ರೇಯಸ್ಕರ. ಸಕಲ ಜೀವರಾಶಿಗಳು ಭಗವದಧೀನ. ಅವನೇ ಸರ್ವತಂತ್ರ ಸ್ವತಂತ್ರ. ಅವನು ಭಕ್ತಿಯಿಂದ ಆರಾಧಿತನಾಗಿಯೇ ಮೋಕ್ಷಕೊಡತಕ್ಕವನು. ಆದ್ದರಿಂದ ಅವನಿಗೆ ಪ್ರೀತಿಕರವಾದ ಪೂಜೆಯನ್ನೇ ಎಲ್ಲರೂ ಮಾಡಬೇಕು. ಅವನಿಗೆ ಪ್ರೀತಿಕರವಾದ ಪೂಜೆಯಾದರೂ ಯಾವುದು? ವರ್ಣಾಶ್ರಮೋಚಿತ ಕರ್ಮಾನುಷ್ಠಾನವೇ ಭಗವಂತನಿಗೆ ಅತ್ಯಂತ ಪ್ರೀತಿಕರವಾದ ಪೂಜೆ. ಒಂದೊಂದು ವರ್ಣದವರಿಗೆ ಒಂದೊಂದು ರೀತಿಯಾದ ಪೂಜೆ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಪ್ರಕೃತ ಸಂದೇಹಕ್ಕೊಳಪಟ್ಟ ಅರ್ಜುನ ಕ್ಷತ್ರಿಯ. ಕ್ಷತ್ರಿಯರಿಗೆ ಉಚಿತವಾದುದು ಭಗವದ್ವೇಷಿಗಳು, ಧರ್ಮಕ್ಕೆ ಕಂಟಕಭೂತರು, ಅವರಿಗೆ ಪ್ರೋತ್ಸಾಹವೀಯುವವರು ಇವರನ್ನು ಯುದ್ಧದಲ್ಲಿ ಎದುರಿಸಿ ಸಂಹರಿಸುವುದೇ ಧರ್ಮ. ಕ್ಷತ್ರಿಯನಾದ ಅರ್ಜುನನಿಗೆ ಇದು ಉಚಿತ. ಅವನು ಇಂತಹ ಧರ್ಮವನ್ನು ಅವಶ್ಯವಾಗಿ ಮಾಡಲೇಬೇಕು. ಈ ರೀತಿಯಾದ ಉಪದೇಶದ ಸಂದರ್ಭದಲ್ಲಿ ಭಗವಂತನಿಗೂ ಜೀವನಿಗೂ ಇರುವ ಸಂಬಂಧಗಳು ಪ್ರಸಕ್ತವಾದ್ದರಿಂದ ಈ

ಆತನನ್ನು ನಂಬಿ ಕೆಟ್ಟವರಿಲ್ಲ.

ವಿಷಯಗಳು ಗೀತೆಯಲ್ಲಿ ವಿಷದಪಡಿಸುವುದು ಅಸಂಗತವಲ್ಲ ಎಂಬುದು ಸರ್ವಜ್ಞಾಚಾರ್ಯರ ಸಮರ್ಪಕವಾದ ಸಮಾಧಾನ.

ಯುದ್ಧದ ಸಂದರ್ಭವನ್ನು ಬಿಟ್ಟು ಬೇರೆಯಾವುದದಾರೊಂದು ಸಮಯದಲ್ಲಿ ಅರ್ಜುನನಿಗೆ ಶ್ರೀಕೃಷ್ಣನು ಗೀತೋಪದೇಶವನ್ನು ಮಾಡಬಹುದಿತ್ತು. ಯುದ್ಧದ ಗಡಿಬಿಡಿಯ ಸಂದರ್ಭದಲ್ಲಿಯೇ ಯಾಕೆ ಉಪದೇಶವನ್ನು ಮಾಡಿದ ಎಂಬುದು ಕೆಲವರ ವಾದ. ಅದಕ್ಕೆ ಸಮಾಧಾನ ಏನೆಂದರೆ **"ನಾಪೃಷ್ಟಃ ಕಸ್ಯಚಿತ್ ಬ್ರೂಯಾತ್"**-ತತ್ವವಿಚಾರವನ್ನು ಶಿಷ್ಯಭಾವದಿಂದ ಪ್ರಶ್ನೆಮಾಡದವರಿಗೆ ಉಪದೇಶವನ್ನು ಮಾಡಬಾರದು. ಪ್ರಕೃತ ಅರ್ಜುನನು ಮೌಢ್ಯವನ್ನು ಹೊಂದಿ, ಶಿಷ್ಯಭಾವವನ್ನು ಹೊಂದುವ ಪ್ರಮೇಯ ಬೇರೆ ಸಮಯದಲ್ಲಿ ಇದ್ದಿಲ್ಲ. ಅರ್ಜುನನಿಗೆ ಇಂತಹ ಕಷ್ಟದ ಪರಿಸ್ಥಿತಿಯು ಬೇರೆ ಸಂದರ್ಭದಲ್ಲಿ ಬಂದಿರಲಿಲ್ಲ. ಯುದ್ಧಾರಂಭದಲ್ಲಿಯೇ ಜಿಜ್ಞಾಸುವಾಗಿ ಕೃಷ್ಣನನ್ನು ಮೊರೆಹೊಂದಿದಾಗ ಅದೇ ಸಂದರ್ಭಲ್ಲಿಯೇ ಶ್ರೀಕೃಷ್ಣನು ಉಪದೇಶವನ್ನು ನೀಡಿದನು.

ಹದಿನೆಂಟು ಅಧ್ಯಾಯದ ಬೃಹತ್ತಾದ ಈ ಗೀತಾಶಾಸ್ತ್ರವನ್ನು ಅತ್ಯಲ್ಪ ಸಮಯದಲ್ಲಿಯೇ ಉಪದೇಶಿಸಲು ಸಾಧ್ಯವೇ? ಆದ್ದರಿಂದ ಈ ಗೀತೆಯು ಅವಿಶ್ವಾಸಾರ್ಹ ಎಂಬುದು ಕೆಲವರ ಆಕ್ಷೇಪ. ಉಪದೇಶಕನಾದ ಶ್ರೀಕೃಷ್ಣನು ಅಘಟಿತಘಟನಾ ಶಕ್ತಿಯುಳ್ಳವನು. ಅರ್ಜುನನಾದರೂ ಬಹಳ ಬುದ್ಧಿವಂತನು. ಬಹಳಷ್ಟು ಕಠಿಣವಾದ, ಗಂಭೀರವಾದ ವಿಷಯಗಳನ್ನು ಸೂಕ್ಷ್ಮ ರೀತಿಯಿಂದ ಹೇಳಿದರೆ ತಿಳಿದುಕೊಳ್ಳುವ ಸಾಮರ್ಥ್ಯವುಳ್ಳವನು ಇಂತಹ ಗುರುಶಿಷ್ಯರ ಸಮಾವೇಶದಲ್ಲಿ ಇದೇನು ಆಶ್ಚರ್ಯವಲ್ಲ. ನಮ್ಮಂತಹ ಅಲ್ಪಮತಿಗಳಿಗೆ ಆಶ್ಚರ್ಯವೆನಿಸಬಹುದು. ಅಗಸ್ತ್ಯಮಹಾಮುನಿಗಳು ಸಮುದ್ರವನ್ನೇ ಪಾನ ಮಾಡಿದರು. ಹನುಮಂತನು ಅತ್ಯಲ್ಪಕಾಲದಲ್ಲೇ ಶತಯೋಜನ ವಿಸ್ತಾರವಾ ಸಮುದ್ರವನ್ನು ದಾಟಿದ. ಅಘಟಿತಘಟನಾಶಕ್ತಿಯುಳ್ಳ ಭಗವಂತನ ಭಕ್ತರುಗಳೇ ಅತಿ ವಿಚಿತ್ರವಾದ ಇಂತಹ ಕಾರ್ಯಗಳನ್ನು ಮಾಡುವಾಗ ಸ್ವತಃ ಭಗವಂತನಿಂದ ಅಸಾಧ್ಯವೇಕೆ? ಈಶ್ವರ ಸ್ವರೂಪನಾದ ವರ್ಣಾನಾತೀತ ಶಕ್ತಿಯುಳ್ಳ ಶ್ರೀಕೃಷ್ಣನು ಅಲ್ಪಸಮಯದಲ್ಲಿ ಗೀತಾಶಾಸ್ತ್ರವನ್ನು ಅರ್ಜುನನಿಗೆ ಉಪದೇಶ ಮಾಡಿದನು ಎಂಬುದು ಯುಕ್ತವೇ ಆಗಿದೆ.

ಬೃಹತ್ತಾದ ಸೈನ್ಯರಾಶಿಯನ್ನು ನೋಡಿ ಯುದ್ಧದ ಸಂದರ್ಭದಲ್ಲಿ ಗೊಂದಲಕ್ಕೊಳಗಾಗಿ ಈ ರೀತಿಯಾದ ಅವ್ಯವಸ್ಥಿತಚಿತ್ತವುಳ್ಳವನಾದನು. ಆದ್ದರಿಂದ ಅರ್ಜುನನು ನಮ್ಮಂತೆ ಅಜ್ಞಾನಿ ಎಂಬುದು ಕೆಲವರ ತಿಳುವಳಿಕೆ. ಆದರೆ ಇದು ಯುಕ್ತವಲ್ಲ. ಅರ್ಜುನನು ದೇವೇಂದ್ರನ ಅವತಾರ. ದೇವತೆಗಳೇ ಬ್ರಹ್ಮಾಪರೋಕ್ಷಿಗಳು. ದೇವತೆಗಳ ಒಡೆಯನಾದ ದೇವೇಂದ್ರನೂ ಬ್ರಹ್ಮಾಪರೋಕ್ಷಿಯೇ. ಸೈಂಧವನ ಸಂಹಾರಕಾಲದಲ್ಲಿ ಹಗಲನ್ನು ರಾತ್ರಿಮಾಡಿದಂತೆ ಶ್ರೀಕೃಷ್ಣನು

(11ನೇ ಪುಟದಲ್ಲಿ...)

**ಇದು ಬರಿಯ ಮಾತಲ್ಲ. ಅನುಭಾವಿಗಳ ಅನುಭವದ ಮಾತು.**

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ, ಬರಹಃ ಕೃಷ್ಣಾ

ವಿದುರನು ಧೃತರಾಷ್ಟ್ರನಿಗೆ, ಅವನು ಮಾಡಲಿರುವ ತಪ್ಪಿನ ತಿಳುವಳಿಕೆ ಹಾಗೂ ಅದರ ಪರಿಣಾಮವನ್ನು ವಿವರಿಸುತ್ತಾ

**ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ ।**
**ಭೋಕ್ತಾರಃ ವಿಪ್ರಮುಚ್ಯಂತೆ ಕರ್ತಾ ದೋಷೇಣ ಲಿಪ್ಯತೇ ॥**

ನಿನ್ನೊಬ್ಬನಿಂದಾಗಬಹುದಾದ ಅನ್ಯಾಯ, ಪಾಪ, ಕೆಟ್ಟ ಕೆಲಸದ ಫಲವನ್ನು ನಾಳೆಯ ದಿನ ಸಮಾಜದ ಜನಗಳೆಲ್ಲಾ ಉಣ್ಣತಕ್ಕಂತಹ ಪ್ರಸಂಗ ಬರುತ್ತದೆ. ಅವರು ಅದನ್ನು ಉಣ್ಣುತ್ತಾರೆ, ತೀರುತ್ತಾರೆ. ಆದರೆ ಧೃತರಾಷ್ಟ್ರ ಆ ಪಾಪದ ಫಲ ಸದಾಕಾಲ ನಿನಗೆ ಬರುತ್ತಲೇ ಇರುತ್ತದೆ ಎಂದು ವಿದುರ ಎಚ್ಚರಿಕೆಯನ್ನು ಕೊಡುತ್ತಾನೆ. ಪ್ರಾಯಶಃ ಧೃತರಾಷ್ಟ್ರ ಒಬ್ಬ, ಒಂದು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡು ಅದರಲ್ಲಿ ಧೃಡವಾಗಿ ನಿಂತಿದ್ದರೆ, ಹದಿನೆಂಟು ಅಕ್ಷೋಹಿಣಿ ಸೈನ್ಯವು ನಾಶವಾಗುವ ಸಂದರ್ಭ ಬರುತ್ತಿರಲಿಲ್ಲ. ಹಾಗೂ ಅದರ ಪಾಪವೂ ಧೃತರಾಷ್ಟ್ರನಿಗೆ ತಟ್ಟುತ್ತಿರಲಿಲ್ಲ. ಆದುದರಿಂದ ನಾಯಕನಾಗಿರತಕ್ಕಂತಹ ವ್ಯಕ್ತಿ ತಾನು ಸಮಾಜದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು.

**ಏಕಯಾ ದ್ವೇ ವಿನಿಶ್ಚಿತ್ಯ ತ್ರೀನ್ ಚತುರ್ಭಿಃ ವಶೀ ಕುರು ।**
**ಪಂಚ ಜಿತ್ವಾ ವಿದಿತ್ವಾ ಷಟ್ ಸಪ್ತ ಹಿತ್ವಾ ಸುಖೀ ಭವ ॥**

ಒಂದರಿಂದ ಎರಡನ್ನು ತೀರ್ಮಾನಮಾಡು, ಮೂರನ್ನು ನಾಲ್ಕರಿಂದ ನಿನ್ನ ಹಿಡಿತಕ್ಕೆ ತಂದುಕೋ, ಐದನ್ನು ನಿಗ್ರಹಮಾಡು, ಆರನ್ನು ತಿಳಿದುಕೋ, ಏಳನ್ನು ತ್ಯಾಗ ಮಾಡು. ಇವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನೆಮ್ಮದಿ, ಸುಖವನ್ನು ನಾವು ತಂದುಕೊಳ್ಳಬಹುದು.

ಒಂದರಿಂದ ಎರಡನ್ನು ತೀರ್ಮಾನ ಮಾಡು. ಮನುಷ್ಯನಿಗೆ ದೇವರು ಒಂದು ವಿವೇಚನಾಶಕ್ತಿ ಎಂದು ಕೊಟ್ಟಿದ್ದಾನೆ. ಇದು ಮನುಷ್ಯನನ್ನು ಇತರರಿಗಿಂತ ಶ್ರೇಷ್ಠನನ್ನಾಗಿ ಮಾಡಿತು. ಅದನ್ನು ನಾವು ಪ್ರಾಣಿಗಳಲ್ಲಿ ಕಾಣುವುದಿಲ್ಲ. ಚತುರ್ಮುಖಬ್ರಹ್ಮನು ಒಂದು ಸಂದರ್ಭದಲ್ಲಿ ಪ್ರಾಣಿಗಳನ್ನು ಸೃಷ್ಟಿಸಿದ. ಸೃಷ್ಟಿಸಿದಾತನಿಗೆ ಕೃತಜ್ಞತೆಯನ್ನು ತೋರಿಸುವ ಹಂತದಲ್ಲಿ ಅವುಗಳು ಇರಲಿಲ್ಲ. ತಮ್ಮ ಆಹಾರವನ್ನು ಹುಡುಕಿಕೊಂಡು ಹೊರಟಿದ್ದವು. ಕೊನೆಗೆ ಮಾನವನನ್ನು ಸೃಷ್ಟಿ ಮಾಡಿದ. ಆ ಮಾನವ ತನ್ನ ಅಪ್ಪ ಯಾರೆಂದು ಹುಡುಕಿ, ಆ ಚತುರ್ಮುಖಬ್ರಹ್ಮನಿಗೆ ಕೃತಜ್ಞತೆಯನ್ನು ಹೇಳಿ ಮುಂದೆ ಆಹಾರವನ್ನು ಹುಡುಕಿಕೊಂಡು

**ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು**

ಹೊರಟನು. ಅಂತು ಮಾನವ ಇತರ ಪ್ರಾಣಿಗಳಿಗಿಂತ ಸ್ವಲ್ಪ ಎತ್ತರದಲ್ಲಿ ನಿಂತಿದ್ದಾನೆ. ಆದರೆ ಈಗಿನ ಕಾಲದಲ್ಲಿ ಮಾನವನನ್ನು ಮತ್ತು ಪ್ರಾಣಿಗಳನ್ನು ವಿಮರ್ಶೆ ಮಾಡಿದರೆ ಇದು ಸತ್ಯವೆಂದು ತೋರಿಬರುವುದಿಲ್ಲ. ಈ ದಿನ ಬಹಳ ಖರ್ಚು ಮಾಡಿ, ವೈಭವದಲ್ಲಿ ಗೃಹಪ್ರವೇಶ ಮಾಡುವಾಗ ಮೊದಲು ಮನೆಯೊಳಗೆ ಒಂದು ಆಕಳನ್ನು ಕಳುಹಿಸುತ್ತಾರೆ. ತದನಂತರದಲ್ಲಿ ಯಜಮಾನನು, ಅವನ ಪತ್ನಿಯು, ಅವರ ಹಿಂದಿನಿಂದ 'ಲಕ್ಷ್ಮೀರ್ಯಸ್ಯ ಪರಿಗ್ರಹ' ಎಂದು ಹೇಳಿಕೊಂಡು ಪುರೋಹಿತರು ನಡೆಯುತ್ತಾರೆ. ಆ ಗೋಮಯ, ಗೋಮೂತ್ರದಿಂದ ಆ ಮನೆಗೆ ಸಂಪತ್ತು ಸಮೃದ್ಧಿ ಆಗುತ್ತದೆಯಂತೆ. ಹಾಗಾದರೆ ಈ ದಿವಸ ಪ್ರಾಣಿಗಳಿಗಿರುವಷ್ಟು ಮಹತ್ವ ಮನುಷ್ಯರಿಗಿಲ್ಲ.

ಮನೆಕಟ್ಟಿದ ಯಜಮಾನ ಮನೆಯೊಳಗೆ ಹೋದರೆ ದಾರಿದ್ರ್ಯ ಕಾಲಿಟ್ಟಂತೆ. ಈ ದಿವಸ ಪ್ರತಿಯೊಂದು ಮನೆಯಲ್ಲಿ ದಾರಿದ್ರ್ಯ ತಾಂಡವವಾಡುತ್ತಿದ್ದರೆ ಅದಕ್ಕೆ ಒಂದೇ ಕಾರಣ. ಹಿಂದಿನ ಕಾಲದಲ್ಲಿ ಶೌಚಕ್ಕೆ ಹೋಗಬೇಕಾದರೆ, ಒಳಗಿದ್ದ ಯಜಮಾನನು ಮನೆಯ ಹೊರಗೆ ಹೋಗುತ್ತಿದ್ದನಂತೆ. ಈಗಿನ ಕಾಲದಲ್ಲಿ ಶೌಚಕ್ಕೆ ಹೋಗಲು, ಮನೆಯ ಹೊರಗಿದ್ದವನು ಒಳಗೆ ಬರುತ್ತಾನೆ. ಇದು ಕಲಿಯುಗದ ಲಕ್ಷಣ. ಆದ್ದರಿಂದ ಇಂತಹ ಮನೆಯಲ್ಲಿ ಶ್ರೇಯಸ್ಸಿರಲು ಹೇಗೆ ಸಾಧ್ಯ ಎಂದು ಹಿರಿಯರು ಮಾಡಿರತಕ್ಕಂತಹ ಪ್ರಶ್ನೆ. ಇಲ್ಲಿಯೂ ಪ್ರಾಣಿಗಳಿಗೆ ಬಹಳ ಮಹತ್ವ ಕೊಟ್ಟಂತಾಯಿತು. ಇನ್ನೂ ಕೆಲವು ವಿಷಯಗಳನ್ನು ತೆಗೆದುಕೊಂಡರೂ ನಮಗಿಂತ ಪ್ರಾಣಿಗಳೇ ಉತ್ತಮ ಎಂದು ಕಂಡುಬರುತ್ತದೆ. ಒಂದು ಕಡೆ ಆಹಾರ ಬಿದ್ದದ್ದನ್ನು ಒಂದು ಕಾಗೆ ಕಂಡರೆ ತಾನು ಕೂಗಿ ಹತ್ತಾರು ಕಾಗೆಗಳನ್ನು ಕರೆದು ಒಟ್ಟಾಗಿ ತಿನ್ನುತ್ತವೆ. ಒಂದು ಕಾಗೆ ಸತ್ತರೆ ಸಾವಿರಾರು ಕಾಗೆಗಳು ಸೇರುತ್ತವೆ. ಆದರೆ ಮನುಷ್ಯರು ಎಲ್ಲಿಯಾದರು ಆಹಾರ ಅಥವಾ ಹಣ ಸಿಕ್ಕಿದರೆ ಒಬ್ಬರೇ ಕಬಳಿಸಲು ನೋಡುತ್ತಾರೆ. ಅದೇ ಎಲ್ಲಿಯಾದರು ಮನೆಯ ಹತ್ತಿರದವರು ಸತ್ತರೇ ಆ ಹೆಣಕ್ಕೆ ಹೆಗಲು ಕೊಡಬೇಕಾಗಬಹುದೆಂದು ಅವರ ಮನೆಯನ್ನೂ ದಾಟಲು ಅಂಜುತ್ತಾರೆ. ಹೀಗೇಕೆ ಆಯಿತು? ಎಂಬ ಪ್ರಶ್ನೆಗೆ, ಇದು ತಿನ್ನುವ ಆಹಾರದ ಪ್ರಭಾವವೆಂದು ಹಿರಿಯರು ಉತ್ತರಿಸುತ್ತಾರೆ. ಭಾಗವತದಲ್ಲಿ ಇದನ್ನು ಹೀಗೆ ವರ್ಣಿಸಿದ್ದಾರೆ. ಮರಗಿಡಗಳಿಗೆ ಹಾಕಿದ ಆಹಾರ ಮೇಲ್ಮುಖವಾಗಿ ಹೋಗಿ ಅವುಗಳ ಬೆಳವಣಿಗೆ ಮೇಲ್ಮುಖವಾಗಿಯೇ ಬಂತು. ಪ್ರಾಣಿಗಳಿಗೆ ಆಹಾರ ಹಾಕಿದರೆ ಅವುಗಳ ಬೆಳವಣಿಗೆ ಅಡ್ಡಕ್ಕೆ ಆಯಿತು. ಮನುಷ್ಯನಿಗೆ ಬಾಯಿಗೆ ಹಾಕಿದ ಆಹಾರ ಕೆಳಗೆ ಹೋಯಿತು. ಹಾಗೆಯೇ ಅವನ ಬೆಳವಣಿಗೆ ಕುಗ್ಗುತ್ತಿದೆ. ಅವರವರ ಆಹಾರಕ್ಕೆ ಅನುಗುಣವಾಗಿ ಮನುಷ್ಯನ, ಮರಗಿಡಗಳ, ಪ್ರಾಣಿಗಳ ಬೆಳವಣಿಗೆ ಆಗುತ್ತದೆ. ★

**ಕೃಷ್ಣನ ಕಥೆಯನ್ನು ಕೇಳುತ್ತಿರಬೇಕು.**

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಕ,ಖ,ಗ,ಘ......ಮುಂತಾದ ಇಪ್ಪತ್ತೈದು ಸ್ಪರ್ಶಗಳನ್ನು ಸ್ಪೃಷ್ಟ ವರ್ಣಗಳೆಂದು ಹೇಳುತ್ತಾರೆ. ಇವುಗಳಲ್ಲಿ ಉಚ್ಚರಿಸುವಾಗ ಒಂದು ಭಾಗ ಇನ್ನೊಂದು ಭಾಗಕ್ಕೆ ಸ್ಪರ್ಶ ಆಗುತ್ತದೆ. ಯರಲವ– ಈಷತ್ ಸ್ಪೃಷ್ಟವರ್ಣಗಳು. ಈ ಅಕ್ಷರಗಳನ್ನು ಉಚ್ಚರಿಸುವಾಗ ಕಿಂಚಿತ್ ಅನುಭವ ಆಗುತ್ತದೆ. ಶಷಸಹಗಳು ನೇಮಸ್ಪೃಷ್ಟ ವರ್ಣಗಳು. ಇವುಗಳನ್ನು ಉಚ್ಚರಿಸುವಾಗ ಅರ್ಧಾಂಶ ಸ್ಪರ್ಶ ಆಗುತ್ತದೆ. ಸ್ವರಗಳು–ಅಸ್ಪೃಷ್ಟ ವರ್ಣಗಳೇ. ಏಕೆಂದರೆ ಇವುಗಳನ್ನು ಉಚ್ಚರಿಸುವಾಗ ಯಾವ ಭಾಗವು ಸ್ಪರ್ಶಿಸಲ್ಪಡುವದಿಲ್ಲ. Direct ಕಂಠದಿಂದ ಉಚ್ಚರಿಸಲ್ಪಡುತ್ತವೆ. ಇದು ಹೇಗೆ? ಉದಾಃಸ್ವರಗಳಲ್ಲಿ 'ಇ'ಕಾರ, ಸ್ಪರ್ಶಗಳಲ್ಲಿ 'ಚ', ಯರಲವಗಳಲ್ಲಿ 'ಯ'ಕಾರ, ಶಷಸಹದಲ್ಲಿ 'ಶ'ಕಾರ ತೆಗೆದುಕೊಳ್ಳುವ. 'ಇ'ಕಾರ ಅಸ್ಪೃಷ್ಟ. ಇದು ಕಂಠದಿಂದ ಯಾವುದರ ಸ್ಪರ್ಷ ಇಲ್ಲದೆ ಉಚ್ಚರಿಸಲ್ಪಡುತ್ತದೆ. ಇ ಕಾರದ ಉಚ್ಚಾರ ಸ್ಥಾನ ಕುತ್ತಿಗೆಯಲ್ಲಿರುವ ಕಿರುನಾಲಿಗೆ. ಇದರಿಂದಲೇ ಉಚ್ಚರಿಸಲ್ಪಡುತ್ತದೆ. ಇದನ್ನು ತಾಲವ್ಯ ಎಂದು ಕರೆಯುತ್ತಾರೆ. ಕುತ್ತಿಗೆಯಿಂದ ಮೇಲೆ ನಾಲಿಗೆಯಿಂದ ಕೆಳಗೆ ಈ ನಾದದ vibration start ಆಗುತ್ತದೆ. ನಾಲಿಗೆ ಕಿರುನಾಲಿಗೆಯನ್ನು ಮುಟ್ಟುವುದಿಲ್ಲ. ಚಕಾರವನ್ನು ಉಚ್ಚಾರ ಮಾಡುವಾಗ ನಾಲಿಗೆ ಹರವಿಕೊಂಡು ಮೇಲಿನ ದವಡೆಯ ಎರಡೂ ಬದಿಯನ್ನು ಮುಟ್ಟುತ್ತದೆ. ಯಕಾರ ಉಚ್ಚರಿಸಲ್ಪಡುವಾಗ ಸ್ವಲ್ಪ ಸ್ಪರ್ಷ ಆಗುತ್ತದೆ. 'ಶ'ಕಾರವನ್ನು ಉಚ್ಚರಿಸುವಾಗ ನಾಲಿಗೆ ದವಡೆಯ ಅರ್ಧಾಂಶವನ್ನು ಮುಟ್ಟುತ್ತದೆ. ಎಲ್ಲಾ ಅಕ್ಷರಗಳಿಗೆ ಉತ್ಪತ್ತಿಯ ಸ್ಥಾನಗಳಿವೆ. ಆಯಾ ಸ್ಥಾನಕ್ಕೆ ಒತ್ತು (pressure) ಬಿದ್ದಾಗ ಉತ್ಪನ್ನ ಆಗುತ್ತದೆ. ಋಗ್ವೇದ, ಯಜುರ್ವೇದ ಹಾಗೂ ಅಥರ್ವವೇದದ ಪ್ರತಿಶಾಖ್ಯೆಗಳಲ್ಲಿ ಸ್ವರದ ಸ್ಥಾನಗಳ ಬಗ್ಗೆ ಹೇಳಿದೆ. ಸಾಮವೇದದಲ್ಲಿ ಸ್ವಲ್ಪ ಬೇರೆಯಾಗಿ ಹೇಳಿದ್ದಾರೆ. ಋಗ್ವೇದದ ಪ್ರತಿಶಾಖೆಯ ಪ್ರಕಾರ ಅ, ಆ ಹಾಗೂ ಅಃ ಹ ಇವುಗಳು ಕಂಠದಿಂದ ಉತ್ಪತ್ತಿಯಾಗುತ್ತವೆ ಎಂದು ಹೇಳಿದೆ. ಎಲ್ಲವು ಕಂಠದಿಂದಲೇ ಆಗುವುದಲ್ಲವಾ? ಎಲ್ಲಾ ಶಬ್ದಗಳು ಕಂಠದಿಂದಲೇ ಉತ್ಪತ್ತಿಯಾದರೂ ಕಂಠದ ಬೇರೆ ಬೇರೆ ಸ್ಥಳಗಳಲ್ಲಿ ಒತ್ತು ಬಿದ್ದು ಬೇರೆ ಬೇರೆ ಉಚ್ಚಾರ ಹೊಂದುತ್ತಿವೆ. ಮೇಲಿನ ನೋಟಕ್ಕೆ ಎಲ್ಲವೂ ಕಂಠದಿಂದಲೇ ಬಂದ ಹಾಗೆ ಕಾಣುತ್ತದೆ.

ಅವರಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು

ಕಂಠದ ಮೇಲೆ ಕೈ ಇಟ್ಟಾಗ vibration ನ ಅರಿವು ಉಂಟಾಗುತ್ತದೆ. ಈ ನಾಲ್ಕು ( ಅ,ಆ ಅಃ ಹ) ಅಕ್ಷರಗಳ ಸ್ಥಾನ ಕಂಠ ಅಥವಾ ಉರಸ್ಯ ಎಂದು ಹೇಳಿದರು. ಕೆಲವರು ಇದನ್ನು ಎದೆಯಿಂದ ಹೊರಡುವ ಸ್ವರ ಎಂದು ಹೇಳಿದ್ದಾರೆ. ಕಂಠ ಎಂಬುದು ಖಚಿತವಾದ ಸ್ಥಾನ. ಏಳು ಸ್ವರದ ಸ್ಥಾನಗಳೆಂದು ಇದರಲ್ಲಿ ಪರಿಗಣಿಸಿದ್ದಾರೆ. ಕಂಠ, ಕಿರುನಾಲಿಗೆ (ತಾಲು) ನಾಲಗೆಯ ಬುಡ (ಜಿಹ್ವಾಮೂಲ) ತುಟಿ, (ಓಷ್ಠ) ಹಲ್ಲು, ಶಿರಸ್ಸು ಹಾಗೂ ಮೂಗು. ಸ್ವರಗಳನ್ನು ಉಚ್ಚರಿಸುವಲ್ಲಿ ಉಪಯೋಗ ಬೀಳುವ ಸ್ಥಾನಗಳು. ಇ, ಈ ಚವರ್ಗ, ಯ, ಶ ಇಷ್ಟು ಶಬ್ದಗಳು ತಾಲುವಿನಿಂದ ಹುಟ್ಟುತ್ತವೆ. ಕಂಠದಿಂದ ಮೇಲೆ ನಾಲಿಗೆಯಿಂದ ಕೆಳಗೆ ಇದರ ಸ್ಥಾನ. ಋ, ೠ, ಲ್, ಕವರ್ಗಗಳು ಜಿಹ್ವಾ ಮೂಲದಿಂದ ಹುಟ್ಟುತ್ತವೆ. ಉ, ಊ ಪವರ್ಗ ಹಾಗೂ 'ವ' ಇವುಗಳು ತುಟಿಗಳಿಂದ ಹುಟ್ಟುತ್ತವೆ. ಏ, ಐ, ಓ, ಔಗಳು ಸಹ ಇದರಿಂದಲೇ ಹುಟ್ಟುತ್ತವೆ. ತವರ್ಗ, ರ,ಲ,ಸ, ಇವುಗಳನ್ನು ದಂತಾಕ್ಷರಗಳೆಂದು ಕರೆದರು. ಇವುಗಳನ್ನು ಉಚ್ಚರಿಸುವಾಗ ನಾಲಿಗೆ ಹಲ್ಲನ್ನು ಸ್ಪರ್ಷಿಸುತ್ತದೆ. ಟವರ್ಗ, ಷಗಳನ್ನು ಉಚ್ಚರಿಸುವಾಗ ನಾಲಗೆಯು ಮೇಲಕ್ಕೆ ಮಡಿಚಿ ಶಿರಸ್ಸಿನ ಸ್ಥಾನವನ್ನು ಮುಟ್ಟುತ್ತದೆ. ಇವುಗಳನ್ನು ಶೀರ್ಷಣ್ಯ ಎಂದು ಕರೆದರು. ಆಯಾ ಶಬ್ದಗಳನ್ನು ಆಯಾ ಸ್ಥಾನಗಳಲ್ಲಿ ಸರಿಯಾಗಿ ಉಚ್ಚರಿಸುವಂತೆ ಪ್ರಯತ್ನ ಮಾಡಬೇಕು. ಇದಕ್ಕಿಂತ ಹೆಚ್ಚು ಮಾಹಿತಿ ಯಜುರ್ವೇದದ ಪ್ರಾತಿಶಾಖ್ಯೆಯಲ್ಲಿದೆ. ಮೊಟ್ಟ ಮೊದಲು ಶಬ್ದ ಉಚ್ಚರಿಸಬೇಕಾದರೆ ವೈಶ್ವಾನರ ಅಗ್ನಿಯ ಪ್ರೇರಣೆಯಿಂದ ನಾಭಿಯಿಂದ ಉಂಟಾಗುತ್ತದೆ. ನಾಭಿಯಲ್ಲಿ ಉಷ್ಣತೆ (ಅಥವಾ energy) ಯ ಅಸಮತೆಯಿಂದ vibration ಉಂಟಾಗುತ್ತದೆ. ಅದು ಹೃದಯದ ಮೂಲಕ ಕಂಠ, ಮೂಗು, ಶಿರಸ್ಸು, ಬಾಯಿ ಮುಂತಾದ ಸ್ಥಾನಗಳಿಂದ ಅಭಿವ್ಯಕ್ತ ಹೊಂದುತ್ತದೆ. ಶಬ್ದ ಅಥವಾ ವರ್ಣಗಳಲ್ಲಿ ಎರಡು ವಿಧ. ನಾದಜನ್ಯ ವರ್ಣಗಳು, ಇನ್ನೊಂದು ಶ್ವಾಸಜನ್ಯ ವರ್ಣಗಳು. ನಾದವೇ ಪ್ರಧಾನವಾಗಿರುವ ವರ್ಣಗಳು ನಾದಜನ್ಯವರ್ಣಗಳು. ಶ್ವಾಸವೇ ಪ್ರಧಾನವಾಗಿರುವ ವರ್ಣಗಳು ಶ್ವಾಸಜನ್ಯವರ್ಣಗಳು. ಕುತ್ತಿಗೆಯ ನಾಳಗಳು ಸಂಕೋಚಗೊಂಡಾಗ ಗಾಳಿ ಹೆಚ್ಚು pressureನಿಂದ ಬಂದು ನಾದ ಉತ್ಪನ್ನವಾಗುತ್ತದೆ. ಕುತ್ತಿಗೆಯ ನಾಳಗಳು ಅರಳಿದಾಗ ಗಾಳಿಯ pressure ಕಮ್ಮಿ ಆಗಿ ನಾದ ಕಮ್ಮಿ ಉಂಟಾಗುತ್ತದೆ. ಕೇವಲ ಶ್ವಾಸ ಮಾತ್ರ ಪ್ರಧಾನವಾಗಿ ಹೊರಚಿಮ್ಮುತ್ತದೆ.

**(ಮುಂದುವರಿಯುವುದು)**

**ಶ್ರೀಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

ಗಣನೆಯಿಲ್ಲದೆ ಜನನಿಯರು ಮೊಲೆ
ಯುಣಿಸಲಾ ಪಯ ಬಿಂದುಗಳ ನಾ
ಗಣಿಸಲಳವೇ ಸಪ್ತಸಾಗರಕಧಿಕವೆನಿಸುವುದು ।
ಬಣಗು ಕಮಲಜನದಕೆ ತಾನೇ
ಮಣಿಯಗಾರನು ಈತ ಮಾಡಿದ
ಕುಣಿಕೆಗಳ ನೀ ಬಿಡಿಸಿ ರಕ್ಷಿಸು ನಮ್ಮನನವರತ ॥೬೨॥

ಲೆಕ್ಕವಿಲ್ಲದಷ್ಟು ತಾಯಂದಿರು ನನಗೆ ಮೊಲೆಯುಣಿಸಿರುವಾಗ ಆ ಮೊಲೆ ಹಾಲಿನ ಬಿಂದುಗಳನ್ನು ನಾನು ಎಣಿಸುವುದು ಶಕ್ಯವೆ? ಏಳುಸಮುದ್ರ ನೀರಿಗಿಂತಲೂ ಅದು ಅಧಿಕವಾಗುವುದು. ಅಲ್ಪನಾದ ಚುತುರ್ಮುಖಬ್ರಹ್ಮ ತಾನೆ ಇದಕ್ಕೆ ವ್ಯವಸ್ಥಾಪಕ. ಈತ ಮಾಡಿದ ಸರಗಂಟುಗಳನ್ನ ನೀನೇ ಬಿಡಿಸಿ ನಮ್ಮನ್ನು ಸದಾ ರಕ್ಷಿಸು.

## ಗಣನೆಯಿಲ್ಲದ ಜನನಿಯರು ಮೊಲೆಯುಣಿಸಲು

ನನ್ನ ಹಿಂದಿನ ಜನ್ಮಗಳ ತಾಯಂದಿರನ್ನು ಎಣಿಸಲು ಹೊರಟರೆ ಅವರೆಷ್ಟೋ! ಗಣನೆಯೇ ಇಲ್ಲ. ಅವರು ಪ್ರತಿಯೊಬ್ಬರೂ ನನಗೆ ಪ್ರೀತಿಯಿಂದ ಮೊಲೆಯುಣಿಸಿದ್ದಾರೆ.

ನನ್ನದೇನಿದ್ದರೂ ಕೇವಲ ಮೂರುದಿನದ ಬಾಳು. ನೂರುವರ್ಷ ಬದುಕಿದೆನೆಂದರೆ ಅದೊಂದು ದೊಡ್ಡ ಪವಾಡವೆನಿಸೀತು. ಚತುರ್ಮುಖಬ್ರಹ್ಮನು ಮಾತ್ರ ನೂರುವರ್ಷಕಾಲ ಬ್ರಹ್ಮಾಂಡದೊಳಗೆ ಎಲ್ಲ ಜೀವಿಗಳನ್ನು ಸೃಷ್ಟಿ ಮಾಡುತ್ತಾನೆ. ನಮ್ಮ ಒಂದುವರ್ಷ ದೇವತೆಗಳಿಗೆ ಒಂದು ದಿನ. ಆದರೆ ಬ್ರಹ್ಮನ ಒಂದು ದಿನವೆಂದರೆ ಅದು ನಮಗೆ ಎಂಟುನೂರು ಅರವತ್ತನಾಲ್ಕು ಕೋಟಿ ವರ್ಷಗಳಾಗುತ್ತವೆ! ಬ್ರಹ್ಮನ ಆಯುಷ್ಯದ ಮೂವತ್ತಾರು ಸಾವಿರದಿನಗಳಲ್ಲಿ ಇದೀಗ ಅರ್ಧಾಂಶದಷ್ಟು ಮಾತ್ರ ಕಳೆದಿದೆ. ಈ ಅವಧಿಯಲ್ಲಿ ನನ್ನನ್ನು ಅವನೆಷ್ಟು ಬಾರಿ ಹುಟ್ಟಿಸಿರುವನೋ! ಎಷ್ಟು ಮಂದಿ ಜನನಿಯರು ನನಗೆ ಮೊಲೆ ಹಾಲು ಉಣಿಸಿರುವರೋ!

## ಆ ಪಯಬಿಂದುಗಳ ನಾ ಗಣಿಸಲಳವೆ?

ಹಿಂದಿನ ಎಲ್ಲ ಜನ್ಮಗಳಲ್ಲಿ ನಾನು ಉಂಡಿರಬಹುದಾದ ತಾಯಿಯ ಎದೆ ಹಾಲು ಎಷ್ಟಿರಬಹುದು? ಎಷ್ಟಿದ್ದರೇನಂತೆ ಎನ್ನುವಂತಿಲ್ಲ. ಆ ಹಾಲಿನ ಒಂದೊಂದು ತೊಟ್ಟು ಕೂಡ ತುಂಬ ಮಹತ್ವದ್ದು. ಅದು ಶಿಶುವಿಗೆ ತಾಯಿಯ ಮೇಲೆ, ತಾಯಿಗೆ ಶಿಶುವಿನ ಮೇಲೆ ಗಾಢವಾದ ಮಧುರವಾದ ಬಾಂಧವ್ಯ ಮೋಹವನ್ನು ಹುಟ್ಟಿಸುತ್ತದೆ. ಈ ಮೋಹ ರಕ್ತದ ಕಣಕಣಗಳಲ್ಲಿ ಸೇರಿಕೊಂಡು ಸಂಸ್ಕಾರರೂಪದಿಂದ ಆತ್ಮನಲ್ಲಿ ಹುದುಗಿಕೊಳ್ಳುತ್ತದೆ. ಮಾಯೆಯಾಗಿ ಕಾಡುತ್ತದೆ. ಮತ್ತೆ ಮತ್ತೆ ಭೂಮಿಯ ಮೇಲೆ ಹುಟ್ಟಿಸಿ ತಾಯಿಯ ಮೊಲೆಹಾಲನ್ನು ಸವಿಯ ಬೇಕೆನ್ನುವ ಬಯಕೆ ಮೂಡಿಸುತ್ತದೆ. ಇಂಥ ಮಹತ್ವದ ಮೊಲೆ ಹಾಲಿನ ಎಷ್ಟು ತೊಟ್ಟುಗಳನ್ನು ಒಂದು ಜನ್ಮದಲ್ಲಿ ನಾನು ಉಂಡಿರುವೆನೋ! ಹಿಂದಿನ ಜನ್ಮಗಳಲ್ಲಿ ಉಂಡಿದ್ದನ್ನೂ ಎಣಿಸಲು ಹೊರಟರೆ ಅದು ನನ್ನಳವೆ?

## ಸಪ್ತಸಾಗರಕಧಿವೆನಿಸುವುದು

ನಮ್ಮ ಹಿಂದೂ ಮಹಾಸಾಗರ, ಅಟ್ಲಾಂಟಿಕ್ ಮಹಾಸಾಗರ, ಶಾಂತಮಹಾಸಾಗರ, ಉತ್ತರಧ್ರುವಸಾಗರ, ಅರಬ್ಬಿಸಮುದ್ರ ಭೂಮಧ್ಯಸಮುದ್ರ ಕಾಸ್ಪಿಯನ್ ಸಮುದ್ರ....... ಇವೆಲ್ಲ ಎಲ್ಲರಿಗೂ ಗೊತ್ತು. ಆದರೆ ಇವು ಕೇವಲ ಒಂದು ಲವಣಸಮುದ್ರದ ಭಾಗಗಳು. ಪುರಾಣಗಳಲ್ಲಿ ಈ ಲವಣಸಮುದ್ರ ಮಾತ್ರವಲ್ಲದೆ ಜೊತೆಗೆ ಬೇರೆ ಇಕ್ಷು ಸುರಾ ಸರ್ಪಿದಧಿ ಕ್ಷೀರ ಶುದ್ಧೋದಕ ಸಮುದ್ರಗಳೂ ವರ್ಣಿತವಾಗಿವೆ. ಈ ಎಲ್ಲ ಸಪ್ತಸಾಗರಗಳಲ್ಲಿರುವ ಎಲ್ಲ ನೀರಿನ ಮೊತ್ತ ನಮ್ಮ ಕಲ್ಪನೆಗೇ ಬರಲಾರದು. ಆದರೆ ಅದಕ್ಕಿಂತಲೂ ಹೆಚ್ಚು, ನಾನು ಪೂರ್ವಜನ್ಮಗಳಲ್ಲಿ ಉಂಡಿರುವ ಜನನಿಯರ ಮೊಲೆಹಾಲಿನ ಮೊತ್ತ ಎಂದು ಮಾತ್ರ ನಿಃಸಂದೇಹವಾಗಿ ಹೇಳಬಹುದು.

## ಬಣಗು ಕಮಲಜನದಕೆ ತಾನೇ ಮಣಿಯಗಾರನು

ನನ್ನ ಈ ಎಲ್ಲ ಜನ್ಮಗಳಿಗೆ ಸೃಷ್ಟಿಕರ್ತನಾದ ಬ್ರಹ್ಮತಾನೇ ಮೇಲ್ವಿಚಾರಕ. ಅವನು ನಿನ್ನ ನಾಭಿಕಮಲದಲ್ಲಿ ಹುಟ್ಟಿರುವವನು, ನಿನ್ನ ಕೂಸು. ಅವನು ನಿನಗೆ ಯಾವ ಲೆಕ್ಕ? ಅಲ್ಪನಾದ ಆತ ಎಲ್ಲ ಜೀವಿಗಳಿಗೂ ಮತ್ತೆ ಮತ್ತೆ ಹೊಸ ಹೊಸ ಶರೀರಗಳನ್ನು ಸೃಷ್ಟಿ ಮಾಡಿಕೊಡುತ್ತಾನೆ. ಅವರೊಳಗೆ ಪರಸ್ಪರ ಬಾಂಧವ್ಯದ ಬೆಸುಗೆ ಹಾಕುತ್ತಾನೆ. ಮೇಲುನೋಟಕ್ಕೆ ಅವನು ಎಲ್ಲ ಸೃಷ್ಟಿಕಾರ್ಯಗಳಿಗೆ ತಾನೇ ಮಣಿಯಗಾರ, ಮೇಲ್ವಿಚಾರಕ, ವ್ಯವಸ್ಥಾಪಕ. ವಾಸ್ತವದಲ್ಲಿ ಅವನನ್ನೂ ತನ್ನ ನಾಭಿಕಮಲದಲ್ಲಿ ಸೃಷ್ಟಿ ಮಾಡಿದವ ನೀನೆಂದ ಮೇಲೆ ನಮಗೇನು ಚಿಂತೆ?

**ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು**

**ಈತ ಮಾಡಿದ ಕುಣಿಕೆಗಳ ನೀ ಬಿಡಿಸಿ ರಕ್ಷಿಸು**

ತಂದೆ ಮಕ್ಕಳ, ತಾಯಿ ಮಕ್ಕಳ, ಅಣ್ಣ ತಮ್ಮಂದಿರ, ಪತಿ ಪತ್ನಿಯರ ಬಾಂಧವ್ಯವೆಂದು ಮೋಹದ ಕುಣಿಕೆಗಳ ಮೇಲೆ ಕುಣಿಕೆಗಳನ್ನು, ಬಿಡಿಸಿಕೊಳ್ಳಲಾಗದ ಮಾಯೆಯ ಸರಗಂಟುಗಳನ್ನು ಆ ಅಲ್ಪನಾದ ಬ್ರಹ್ಮ ಸದಾ ಮಾಡುತ್ತಿದ್ದಾನೆ. ಅವೆಲ್ಲವನ್ನೂ ಬಿಡಿಸಿಕೊಂಡು ನಿನ್ನೊಬ್ಬನನ್ನೇ ತಾಯಿ ತಂದೆ ಬಂಧು ಬಳಗ ಎಲ್ಲವೂ ಎಂದು ಕಂಡುಕೊಳ್ಳಲು ನಾನೇನೋ ಯತ್ನಿಸುತ್ತಿದ್ದೇನೆ. ಆದರೆ ಆಗುತ್ತಿಲ್ಲ. ಮತ್ತೆ ಮತ್ತೆ ಬೇರೆ ಬೇರೆ ಜನರ ರಕ್ತಸಂಬಂಧಗಳಲ್ಲಿ ಬಂಧಿತನೇ ಆಗುತ್ತಿದ್ದೇನೆ. ಅವರು ಯಾರೂ ನನ್ನನ್ನು ಕಾಪಾಡುವುದಿಲ್ಲ. ಏಕೆಂದರೆ ಅವರೂ ನನ್ನಂತೆಯೇ ಈ ಬಂಧನದಲ್ಲಿ ತಮ್ಮನ್ನು ಸಿಲುಕಿಸಿಕೊಂಡವರೆ. ಎಲ್ಲರೂ ಸಂಸಾರದುಃಖದ ಕೆಸರಲ್ಲಿ ಬಿದ್ದಿದ್ದೇವೆ. ಯಾರು ಯಾರನ್ನೂ ಎತ್ತಿ ಹಾಕಲು ಸಮರ್ಥರಲ್ಲ. ನೀನೆ ಬಿಡಿಸಬೇಕು. ಬಿಡಿಸಿ ನೀನೇ ನಮ್ಮನ್ನು ಅನವರತ ರಕ್ಷಿಸಬೇಕು. ★

---

(4ನೇ ಪುಟದಿಂದ...)

ತತ್ಕಾಲದಲ್ಲಿ ಅರ್ಜುನನಿಗೆ ಅಜ್ಞಾನವನ್ನು ಸೃಷ್ಟಿಸಿದನು. ಆ ಮೂಲಕ ಅವನನ್ನು ಗೊಂದಲವುಳ್ಳವನಂತೆ ಮಾಡಿ, ಅವನ ನಿಮಿತ್ತವನ್ನಾಗಿ ಇಟ್ಟುಕೊಂಡು ಸಮಸ್ತ ಲೋಕದ ಜನರಿಗೋಸ್ಕರ ಗೀತೋಪದೇಶವನ್ನು ಮಾಡಿದನು. ಗೀತೆಯ ಉಪಸಂಹಾರದಲ್ಲಿ **"ನಷ್ಟೋ ಮೋಹಃ ಸ್ಮೃತಿರ್ಲಬ್ಧಾ"** ನನ್ನ ಮೋಹವು ಹೋಯಿತು. ಪುನಃಜ್ಞಾನಬಂತು ಎಂಬ ಅರ್ಜುನನ ವಾಕ್ಯದಿಂದ ಅರ್ಜುನನಿಗೆ ಹಿಂದೆ ಜ್ಞಾನ ಇತ್ತು. ಮಧ್ಯದಲ್ಲಿ ಮೋಹದಿಂದಾಗಿ ಬಂದ ಅಜ್ಞಾನವು ಉಪದೇಶದಿಂದ ನಾಶವಾಗಿ ಪುನಃ ಹಿಂದಿನ ಜ್ಞಾನವೇ ಬಂತು ಎನ್ನುವ ವಿಷಯವು ಸ್ಪಷ್ಟವಾಗುತ್ತದೆ. ಒಂದು ವಿಷಯವು ತಿಳಿಯದೇ ಇದ್ದಿದ್ದರೆ ಸ್ಮರಣೆಗೆ ಬಂತು ಎಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ ತಿಳಿಯದ್ದಿದ್ದದನ್ನು ಸ್ಮರಿಸಲು ಬರುವುದಿಲ್ಲ. ಆದ್ದರಿಂದಲೇ ಅರ್ಜುನನು ಜ್ಞಾನಿ ಎಂಬುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಅರ್ಜುನನು ಶ್ರೀಕೃಷ್ಣನಿಗೆ ಪರಮ ಪ್ರೀತ್ಯಾಸ್ಪದನಾಗಿದ್ದಾನೆ. ಶ್ರೀಕೃಷ್ಣನೇ ಹೇಳಿದಂತೆ **"ಜ್ಞಾನೀ ಪ್ರಿಯತಮೋತೋsಮೇ"** ಜ್ಞಾನಿಗಳ ಮೇಲೆ ಶ್ರೀಕೃಷ್ಣನಿಗೆ ಸಹಜ ಪ್ರೀತಿ. ದೇವೇಂದ್ರನ ಅವತಾರಿಯಾದ ಅರ್ಜುನನು ಬ್ರಹ್ಮಜ್ಞಾನಿಯಾದ್ದರಿಂದ ಅವನಿಗೆ ತತ್ಕಾಲದಲ್ಲಿ ಅಜ್ಞಾನಬಂದರೂ ಅವನು ನಮ್ಮಷ್ಟು ಅಜ್ಞಾನಿಯಲ್ಲ. ಇಂತಹ ಅರ್ಜುನನ ಬಗ್ಗೆ ವಿಶೇಷವಾದ ಪ್ರೀತಿ ಇದ್ದದ್ದರಿಂದಲೇ ತಾಯಿ ಮಕ್ಕಳಿಗೆ ಪ್ರೀತಿ ಪೂರ್ವಕವಾಗಿ ಉಪದೇಶ ಮಾಡುವ ರೀತಿಯಲ್ಲಿ ಶ್ರೀಕೃಷ್ಣನು ಉಪದೇಶವನ್ನು ಮಾಡುತ್ತಾನೆ. ★

**ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ**

# ಅಧರ್ಮಕ್ಕೆ ಉಳಿವಿಲ್ಲ, ಧರ್ಮಕ್ಕೆ ಅಳಿವಿಲ್ಲ

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಕದ್ರೂವಿನತೆಯರ ವಿವಾದದ ಕಥೆ ಕೇಳಿದೆವು. ಉಚ್ಚೈಃಶ್ರವಸ್ ಕುದುರೆಯ ಬಣ್ಣದ ಬಗ್ಗೆ ವಿವಾದ ಶುರುವಾಗಿ ವಿನತೆ ಕದ್ರೂವಿನ ದಾಸ್ಯವನ್ನು ಅನುಭವಿಸಬೇಕಾಯಿತು. ಕುದುರೆ ಬಿಳಿ ಎಂದು ವಿನತೆ. ಅದರ ಬಾಲ ಕಪ್ಪು ಎಂದು ಕದ್ರೂ. ಸೋತವರು ಗೆದ್ದವರ ದಾಸಿಯಾಗಬೇಕೆಂದು ಪಣವಿಟ್ಟುಕೊಂಡರು. ಸೋಲಿನ ಭಯದಿಂದ ತನ್ನ ಮಕ್ಕಳಾದ ಹಲವು ಕಪ್ಪು ಸರ್ಪಗಳಿಗೆ ಕುದುರೆಯ ಬಾಲಕ್ಕೆ ಮುತ್ತಿಕೊಳ್ಳುವಂತೆ ಕೇಳಿಕೊಂಡಳು. ಒಪ್ಪದಿದ್ದ ಸರ್ಪಗಳಿಗೆ ಜನಮೇಜಯನ ಸರ್ಪಸತ್ರದಲ್ಲಿ ನೀವೆಲ್ಲ ಸುಟ್ಟು ಬೂದಿಯಾಗಿರಿ ಎಂದು ಶಾಪಕೊಟ್ಟಳು. ಚತುರ್ಮುಖಬ್ರಹ್ಮ ಈ ಮಾತೃ ಶಾಪವನ್ನು ಅನುಮೋದಿಸಿದರು.

ಕದ್ರೂವಿನ ಮಕ್ಕಳಾದ ನಾಗಗಳಲ್ಲಿ ಹಿರಿಯನಾದ ಶೇಷ ಅಮ್ಮನನ್ನು ಬಿಟ್ಟು ಗಂಧಮಾದನದಲ್ಲಿ, ಬದರಿಯಲ್ಲಿ, ಗೋಕರ್ಣದಲ್ಲಿ, ಪುಷ್ಕರಾರಣ್ಯದಲ್ಲಿ, ಹಿಮಾಲಯದ ತಡಿಯ ಪುಣ್ಯಕ್ಷೇತ್ರಗಳಲ್ಲಿ ಏಕಾಗ್ರತೆಯಿಂದ ವಾಯುಭಕ್ಷನಾಗಿ ತೀವ್ರ ತಪಸ್ಸನ್ನು ಮಾಡಿದನು. ಚತುರ್ಮುಖಬ್ರಹ್ಮ 'ಶೇಷ! ಈ ತಪಸ್ಸಿನ ಉದ್ದೇಶವೇನು? ಹೇಳು' ಎಂದರು. ನನ್ನ ಸಹೋದರರು ಮಂದಬುದ್ಧಿಯವರು. ಸಣ್ಣ ಬುದ್ಧಿಯ ಅವರ ಒಡನಾಟ ನನಗೆ ಹಿಡಿಸಿಲ್ಲ. ಶತ್ರುಗಳಂತೆ ಪರಸ್ಪರ ಅಸೂಯೆ ಪಡುತ್ತಾರೆ. ಇವರ ಸಹವಾಸ ಬೇಡವೆಂದು ಇಲ್ಲಿ ಬಂದು ತಪಸ್ಸಿಗೆ ಕೂತಿರುವೆ. ಇವರಾರು ವಿನತೆಯನ್ನು ಸಹಿಸಿಕೊಳ್ಳುವುದಿಲ್ಲ. ಅಂತರಿಕ್ಷಚಾರಿಯಾದ ನಮ್ಮಣ್ಣ ವಿನತಾನಂದನ ಗರುಡನನ್ನು ದ್ವೇಷ ಮಾಡುತ್ತಾರೆ. ಅವನು ತಂದೆ ಕಶ್ಯಪರ ಅನುಗ್ರಹದ ವರಬಲದಿಂದ ಬಲವತ್ತರನಾಗಿದ್ದಾನೆ. ಅಂತಹ ಸಜ್ಜನನನ್ನು ದ್ವೇಷಿಸುವ ಅಸೂಯೆ ಪಡುವ ಸಣ್ಣ ಮನಸ್ಸಿನ ಸಹೋದರರ ಬಾಂಧವ್ಯ ಬೇಸರವಾಗಿದೆ. ತಪಸ್ಸು ಮಾಡುತ್ತಾ ಈ ಶರೀರ ಪರಿತ್ಯಾಗ ಮಾಡುವ ನಿರ್ಧಾರದಲ್ಲಿದ್ದೇನೆ. ಮರಣೋತ್ತರದಲ್ಲಿಯೂ ಆ ಸೋದರರ ಸಹವಾಸ ಬೇಡ.

ಶೇಷನ ಮನದಾಳದ ವ್ಯಥೆಯ ಮಾತುಗಳನ್ನು ಆಲಿಸಿದ ಬ್ರಹ್ಮದೇವರು ಹೇಳಿದರು– ಶೇಷ! ನಿನ್ನ ವಿಷಾದ ನನಗೆ ಅರ್ಥವಾಗಿದೆ. ತಾಯಿಯಲ್ಲಿ ನಡೆದುಕೊಂಡ ಅಪರಾಧದಿಂದ ನಿನ್ನ ಸಹೋದರರಿಗೆ ಭಯವುಂಟಾಗಿದೆ. ಅವರ ದುರ್ನಡೆಯನ್ನು ತಿಳಿದಿದ್ದೇನೆ. ಅದಕ್ಕೆಲ್ಲ

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು

ಪರಿಹಾರದ ವ್ಯವಸ್ಥೆಯೂ ಆಗಿದೆ.

ದೈವಾನುಗ್ರಹದಿಂದ ನಿನಗೆ ಧರ್ಮದಲ್ಲಿ ಆಸಕ್ತಿ ಬೆಳೆದಿದೆ. ನಿನ್ನಲ್ಲಿ ನನಗೆ ಪರಮ ಪ್ರೀತಿಯಿದೆ. ನಿನ್ನ ಬುದ್ಧಿಗೆ ಹೀಗೇ ಮತ್ತೆ ಮತ್ತೆ ಧರ್ಮದಲ್ಲಿ ಆಸಕ್ತಿ ವೃದ್ಧಿಯಾಗಲಿ. ವರವನ್ನು ಕೇಳು. ಕೊಡುತ್ತೇನೆ. ಶೇಷ ಮತ್ತೆ ಪ್ರಾರ್ಥಿಸಿದ. ನಿಮ್ಮ ಮಾತಿನಂತೆ ನನಗೆ ಧರ್ಮದಲ್ಲಿ, ಶಮದಲ್ಲಿ, ತಪಸ್ಸಿನಲ್ಲಿ ಬುದ್ಧಿ ಸ್ಥಿರವಾಗಲಿ. ಇದೇ ನಾನು ಕೇಳುವ ವರ.

ಶೇಷನ ಧರ್ಮನಿಷ್ಠೆ ನೋಡಿ ಸಂತಸಗೊಂಡ ಬ್ರಹ್ಮದೇವರು ತಥಾಸ್ತು ಎಂದು ಹೇಳಿ 'ನನ್ನ ಆಜ್ಞೆಯಂತೆ ಪ್ರಜಾಹಿತಕಾರಿಯಾದ ಮತ್ತೊಂದು ಮಹಾಕಾರ್ಯ ಮಾಡಬೇಕು ನೀನು' ಎಂದರು. ಶೈಲ ವನ ಸಾಗರ ಗ್ರಾಮ ಪಟ್ಟಣಗಳಿಂದ ಕೂಡಿದ ಈ ಮಹೀಮಂಡಲವನ್ನು ಇದು ಅಚಲವಾಗಿರುವಂತೆ ಹೊರಬೇಕು. ಭೂಮಿಯ ಬುಡಕ್ಕೆ ಹೋಗು. ನಿನಗೆ ದಾರಿ ಬಿಡುತ್ತದೆ ಧರಣೀ. ಈ ಪೃಥೀವೀಧಾರಣೆಯನ್ನು ನೀನು ಮಾಡಿದರೆ ಅದು ನನಗೆ ಪ್ರಿಯವಾಗುತ್ತದೆ ಎಂದು ಆಜ್ಞಾಪಿಸಿದರು. ವಿರಿಂಚಿಯ ವಿಶೇಷಾಜ್ಞೆಯನ್ನು ಶಿರಸಾ ವಹಿಸಿದ ಶೇಷ ಭೂ–ತಲವನ್ನು ಪ್ರವೇಶಿಸಿ ಬುಡದಲ್ಲಿ ತನ್ನ ಫಣಾಮಂಡಲದಲ್ಲಿ ಧರಣಿಮಂಡಲವನ್ನು ಹೊತ್ತು ನಿಂತನು. ಪಾತಾಳದ ನಾಗಗಳೆಲ್ಲ ಶೇಷನಿಗೆ ಪಟ್ಟಾಭಿಷೇಕ ಮಾಡಿದವು. ವೈನತೇಯನೂ ಸಹಕರಿಸಿದ.

ಇತ್ತ ಶೇಷನ ಅನಂತರದ ಕದ್ರೂಸುತನಾದ ವಾಸುಕಿಯು ತನ್ನೆಲ್ಲ ಸಹೋದರರೊಂದಿಗೆ ಅವರಿಗೆ ಮಾತೃಶಾಪದಿಂದ ಬಿಡುಗಡೆ ಹೇಗೆ ಎಂದು ಮಂತ್ರಾಲೋಚನೆ ಮಾಡಿದನು. ಬೇರೆಲ್ಲ ಶಾಪಗಳಿಗೆ ಒಂದು ಪರಿಹಾರವಿರುತ್ತದೆ. ಮಾತೃಶಾಪಕ್ಕೆ ಬಿಡುಗಡೆಯೇ ಇಲ್ಲ. ಬ್ರಹ್ಮನ ಎದುರಿಗೆ ತಾಯಿ ಶಾಪ ಕೊಟ್ಟ ಸಂಗತಿ ಕೇಳಿ ಮನದಲ್ಲಿ ಭಯವುಂಟಾಗಿದೆ. ಆ ಬ್ರಹ್ಮ, ಅಮ್ಮ ಶಾಪ ಕೊಡುವಾಗ ತಡೆಯಲೇ ಇಲ್ಲ. ನಿಜವಾಗಿ ನಮಗೆ ಸರ್ವನಾಶದ ಆಪತ್ತು ಬಂದೊದಗಿದೆ. ಸರ್ಪಗಳಿಗೆ ಶಾಪಬಾಧೆ ತಟ್ಟದಿರುವಂತೆ ಏನು ಉಪಾಯ ಮಾಡೋಣ! ಬುದ್ಧಿವಂತರಾದ ನಾವೆಲ್ಲ ಕಲೆತು ಯೋಚಿಸೋಣ ಎಂದನು ವಾಸುಕಿ. ಜನಮೇಜಯನ ಯಜ್ಞವೇ ನಡೆಯದಂತೆ ಮಾಡೋಣವೇ? ಯಜ್ಞ ನಡೆದರೂ ಸರ್ಪಗಳಿಗೆ ಆಪತ್ತು ಬಾರದಿರುವಂತೆ ಮಾಡೋಣವೇ? ಹೇಳಿ! ನಿಮ್ಮ ಸಲಹೆ ಏನು?

ಎಲ್ಲ ಸರ್ಪಗಳು ತಮ್ಮ ತಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸಿ ಸಲಹೆ ಕೊಟ್ಟರು.– ಕೆಲವರೆಂದರು–ಜನಮೇಜಯನ ಬಳಿಗೆ ಬ್ರಾಹ್ಮಣವೇಷದಿಂದ ಹೋಗಿ ಯಜ್ಞಮಾಡುವುದಿಲ್ಲ ಎಂಬ ನಿರ್ಧಾರವನ್ನೇ ಭಿಕ್ಷೆಯಾಗಿ ಕೇಳೋಣ.

**ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ**

ಮತ್ತೆ ಕೆಲವು ಪಂಡಿತಮಾನಿಗಳು ಅರುಹಿದರು. ನಾವೆಲ್ಲ ಜನಮೇಜಯನಿಗೆ ಮಂತ್ರಿಗಳಾಗಿ ಸೇರಿಕೊಳ್ಳೋಣ. ಯಜ್ಞಾಚರಣೆಯ ಬಗ್ಗೆ ನಮ್ಮ ಸಲಹೆ ಕೇಳಿಯೇ ಕೇಳುತ್ತಾನೆ. ಆಗ ಇಹ-ಪರಗಳಲ್ಲಿ ಅನೇಕ ದೋಷಗಳನ್ನು ಹೇಳಿ ಹೆದರಿಸಿ ಯಜ್ಞಮಾಡಬಾರದು ಎನ್ನೋಣ.

ಇನ್ನೂ ಹಲವು ನಾಗಗಳು ಹೇಳಿದರು. ನಮ್ಮಲ್ಲಿ ಯಾರಾದರೊಬ್ಬ ನಾಗ ಹೋಗಿ ಸರ್ಪಸತ್ರದ ಪ್ರಧಾನ ಪುರೋಹಿತರನ್ನು ಕಚ್ಚಿ ಸಾಯಿಸಿಬಿಡೋಣ. ಸರ್ಪಸತ್ರಗಳನ್ನು ಬಲ್ಲ ಬೇರೆ ಋತ್ವಿಜರಿದ್ದಾರೆ. ಅವರನ್ನೂ ಕಚ್ಚಿ ಕೊಂದುಬಿಡೋಣ.

ಕೆಲವು ದಯಾಳು ಧಾರ್ಮಿಕ ನಾಗರು ಹೇಳಿದರು. ನಿಮ್ಮ ಕುಬುದ್ಧಿ ಸರಿಯಲ್ಲ. ಬ್ರಹ್ಮಹತ್ಯೆ ತರವಲ್ಲ. ದುಃಖಬಂದಾಗ ಧರ್ಮದ ತಳಹದಿಯ ಪರಿಹಾರ ಕಾರ್ಯಕೈಗೊಂಡರೆ ಉತ್ತಮ ಶಾಂತಿ ಲಭಿಸುವುದು. ಅಧರ್ಮ ಮಾರ್ಗದ ಪರಿಹಾರೋಪಾಯಗಳು ಜಗತ್ತನ್ನೇ ಹಾಳು ಮಾಡುತ್ತವೆ.

ಅತಿಬುದ್ಧಿವಂತ ನಾಗಗಳೆಂದರು-ನಾವೆಲ್ಲ ಮೋಡಗಳಾಗಿ ಜೋರಾಗಿ ಮಳೆ ಸುರಿಸಿ ಯಜ್ಞಾಗ್ನಿಯನ್ನು ಆರಿಸಿ ಬಿಡೋಣ. ಕೆಲವರು ಸ್ರುಕ್‌ಸ್ರುವ, ಯಜ್ಞಪಾತ್ರೆಗಳನ್ನು ಕದ್ದುಬಿಡೋಣ. ಅದರಿಂದ ಯಜ್ಞ ವಿಘ್ನವುಂಟಾಗುತ್ತದೆ. ನೂರಾರು ಸಾವಿರಾರು ನಾಗಗಳು ತೆರಳಿ ಹೊರಳಿ ಯಜ್ಞಕ್ಕೆ ಬಂದ ಜನರನ್ನೆಲ್ಲ ಕಚ್ಚಿ ಬಿಡೋಣ. ಉಪಾಯವಾಗಿ ಯಜ್ಞ ನಿಂತು ಹೋಗುತ್ತದೆ. ಅಥವಾ ಯಜ್ಞದ ಸಂಸ್ಕೃತವಾದ ಹವಿಸ್ಸನ್ನು ಮುಟ್ಟಿ ತಿಂದು ದೂಷಿತಗೊಳಿಸೋಣ. ಅಥವಾ ಹವಿಸ್ಸಲ್ಲಿ ಮಲಮೂತ್ರ ವಿಸರ್ಜನೆ ಮಾಡಿ ಅಪವಿತ್ರಗೊಳಿಸೋಣ.

ಕೆಲವರು ಹೇಳಿದರು. ಯಜ್ಞವಿಘ್ನವುಂಟು ಮಾಡುತ್ತೇವೆ! ಕೇಳಿದಷ್ಟು ದಕ್ಷಿಣೆ ಕೊಡು ಎಂದು ಹೆದರಿಸೋಣ. ರಾಜ ಬೆದರಿ ನಮ್ಮ ಕೈವಶನಾಗುತ್ತಾನೆ.

ಕೆಲವರು ಸಲಹೆ ನೀಡಿದರು. ರಾಜ ಸ್ನಾನಕ್ಕೆಂದು ನೀರಿಗಿಳಿದಾಗ ಹಿಡಿದೆಳೆದು ಮುಳುಗಿಸಿ ಕಚ್ಚಿ ಬಿಡೋಣ. ರಾಜನೇ ಸತ್ತರೆ ಯಜ್ಞ ಹೇಗೆ ನಡೆಯುತ್ತದೆ?

ಹೀಗೆ ಮಾಡೋಣ-ರಾಜನನ್ನೇ ಅಪಹರಣ ಮಾಡಿ ನಮ್ಮ ಮನೆಯಲ್ಲಿ ಅವನನ್ನು ಕಟ್ಟಿ ಹಾಕೋಣ ಎಂದರು ಕೆಲವು ನಾಗಗಳು. ವಾಸುಕೀ ನಾವೆಲ್ಲ ಸಲಹೆ ಕೊಟ್ಟಿದ್ದೇವೆ. ನಿನ್ನ ನಿರ್ಧಾರ ತಿಳಿಸು ಎಂದು ಹೇಳಿ ವಾಸುಕಿಯ ಮುಖವನ್ನೇ ಕುತೂಹಲದಿಂದ ನೋಡಹತ್ತಿದವು ನಾಗಗಳು. ವಾಸುಕಿಯು ಹೇಳಿದ-ನಿಮ್ಮ ಸಲಹೆ ಯಾವುದೂ ಸೂಕ್ತವಾಗಿಲ್ಲ.

**ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.**

ನಿಮಗೆಲ್ಲ ಹಿತವಾಗುವ ಮಾರ್ಗವನ್ನು ನಾನು ಅಲೋಚನೆ ಮಾಡುತ್ತಿದ್ದೇನೆ. ಏನೂ ತೋಚುತ್ತಿಲ್ಲ. ಆಗ ನಾಗಗಳ ಗುಂಪಿನಿಂದ 'ಏಲಾಪತ್ರ'ನೆಂಬ ನಾಗ ಮುಂದೆ ಬಂದು ನುಡಿದ. ಹಳೇ ಸಂಗತಿಯೊಂದು ನನಗೆ ನೆನಪಾಗುತ್ತಿದೆ. ಕೇಳಿ–ಈ ಸರ್ಪಸತ್ರ ನಡೆದೇ ನಡೆಯುತ್ತದೆ. ಜನಮೇಜಯ ಪಾಂಡವವಂಶದವನು. ಅವನನ್ನು ತಡೆಯಲು ಸಾಧ್ಯವೂ ಇಲ್ಲ. ದೈವದಿಂದ ತೊಂದರೆಗೊಳಗಾದವರಿಗೆ ದೈವವೇ ಪರಾಯಣ. ಈ ಭಯದಿಂದ ಪರಿಹಾರವಾಗಲು ದೈವವನ್ನೇ ಆಶ್ರಯಿಸಬೇಕು. ನಮ್ಮಮ್ಮ ಸರ್ಪಗಳಿಗೆ ಶಾಪಕೊಟ್ಟಾಗ ಅಮ್ಮನ ಮಡಿಲಲ್ಲೇ ಇದ್ದ ನನಗೆ ದೇವತೆಗಳು ಹಾಗೂ ಬ್ರಹ್ಮದೇವರ ಸಂವಾದ ಕೇಳಿಸಿತು. ದೇವತೆಗಳೆಲ್ಲ ಬ್ರಹ್ಮದೇವರಲ್ಲಿ ಹೋಗಿ ಕೇಳಿದರು–ಸ್ವತಃ ತಾಯಿ ಕದ್ರೂವೇ ತನ್ನ ಮಕ್ಕಳಿಗೆ ತಮ್ಮ ಮುಂದೇಯೇ ಜನಮೇಜಯನ ಸರ್ಪಸತ್ರದಲ್ಲಿ ಸುಟ್ಟು ಸಾಯುವಂತೆ ಶಾಪಕೊಟ್ಟರೂ ತಾವೇಕೆ ತಡೆಯಲಿಲ್ಲ?

ಬ್ರಹ್ಮದೇವರೆಂದರು–ಅನೇಕ ನಾಗಗಳು ವಿಷೋಲ್ಬಣಗಳಾದ ಘೋರರೂಪದ ದುಷ್ಟಸ್ವಭಾವದವುಗಳು ಆಗಿವೆ. ಪ್ರಜಾವರ್ಗದ ಹಿತದೃಷ್ಟಿಯಿಂದ ಆ ದುಷ್ಟನಾಗಗಳಿಗೆ ಮಾತೃಶಾಪದಿಂದ ಮರಣದಂಡನೆ ಒಳ್ಳೆಯದೇ ಎಂದು ಭಾವಿಸಿ ತಡೆಯಲಿಲ್ಲ. ಎಲ್ಲ ಸರ್ಪಗಳು ಸಾಯುವುದಿಲ್ಲ. ಯಾವ ನಾಗಗಳು ಪಾಪಾಚಾರಿಗಳು ಹಾಗೂ ವಿಷವಿದೂಷಿತವಾಗಿವೆ ಅವು ಬದುಕುಳಿಯುವುದಿಲ್ಲ. ಧಾರ್ಮಿಕ ನಾಗಗಳು ನಾಶವಾಗುವುದಿಲ್ಲ. ಯಾಯಾವರ ವೃತ್ತಿಯಕುಲದ ಜರತ್ಕಾರು ಎಂಬ ಶ್ರೇಷ್ಠ ಋಷಿಯ ಪುತ್ರನಾದ ಆಸ್ತೀಕನಿಂದ ಧಾರ್ಮಿಕಸರ್ಪಗಳ ಬಿಡುಗಡೆಯಾಗಿರುತ್ತವೆ.

ಆ ಜರತ್ಕಾರುವಿಗೆ ಯಾವ ಹೆಣ್ಣಲ್ಲಿ ಆಸ್ತೀಕನೆಂಬ ಮಗ ಹುಟ್ಟುತ್ತಾನೆ? ಎಂದು ದೇವತೆಗಳು ಕೇಳಿದರು– ವಾಸುಕಿಯ ತಂಗಿ ಜರತ್ಕಾರು ಈ ಜರತ್ಕಾರು ಮುನಿಯ ಹೆಂಡತಿಯಾಗುತ್ತಾಳೆ. ಅವಳಲ್ಲಿ ಆಸ್ತೀಕನೆಂಬ ವೇದವೇದಾಂಗಪಾರಂಗತನಾದ ಮಗ ಹುಟ್ಟುತ್ತಾನೆ. ಅವನಿಂದ ಸಾತ್ವಿಕಸರ್ಪಗಳಿಗೆ ವಿಮುಕ್ತಿ ದೊರೆಯುತ್ತದೆ ಎಂದು ಬ್ರಹ್ಮದೇವರು ಹೇಳಿದರು. ಬಳಿಕ ಸುರರು–ವಿರಿಂಚಿ ಎಲ್ಲ ತಮ್ಮ ಲೋಕಕ್ಕೆ ತೆರಳಿದರು.

ವಾಸುಕಿ! ಕನ್ಯಾಭಿಕ್ಷೆ ಕೇಳಿ ಬರುವ ಜರತ್ಕಾರು ಋಷಿಗೆ ಅದೇ ಹೆಸರಿನ ನಿನ್ನ ತಂಗಿಯನ್ನು ಕೊಟ್ಟು ಮದುವೆ ಮಾಡು. ನಿನ್ನ ತಂಗಿಯ ಮೂಲಕ ನಾಗಗಳ ಭಯಶಾಂತಿ ಯಾಗುವುದು. ಇದೊಂದು ನಾನು ಕೇಳಿದ ಸಂಗತಿಯ ಆಧಾರದ ಸೂಕ್ತ ಸಲಹೆ.

ಏಲಾಪತ್ರನಾಗನ ಅಭಿಪ್ರಾಯವನ್ನು ವಾಸುಕಿ ಒಪ್ಪಿದ.

(34ನೇ ಪುಟದಲ್ಲಿ...)

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗಬೇಡ.

## ಪೂಜ್ಯ ಕೂಡ್ಲಿ ಆರ್ಯ ಅಕ್ಷೋಭ್ಯಮಠದ ಹಿರಿಯ ಶ್ರೀಪಾದರ ನಿರ್ಯಾಣ

### ಪಲಿಮಾರು ಶ್ರೀಪಾದರ ಸಂತಾಪ

ಕೂಡ್ಲಿ ಆರ್ಯ ಅಕ್ಷೋಭ್ಯಮಠದ ಶ್ರೀಶ್ರೀ ರಘುಪ್ರಿಯತೀರ್ಥರು ಬೃಂದಾವನಸ್ಥರಾದ ವಿಷಯ ತಿಳಿದು ನಮಗೆ ತುಂಬಾ ವಿಷಾದವಾಗಿದೆ. ಅತ್ಯಂತ ಸದಾಚಾರಿಗಳೂ, ನಿಷ್ಠಾವಂತರೂ, ನಿರಂತರ ಪಾಠ–ಪ್ರವಚನ ನಿರತರೂ, ಸಹೃದಯರೂ ಆಗಿದ್ದ ಶ್ರೀಪಾದರು ತುಂಬ ಸರಳಜೀವಿಗಳಾಗಿದ್ದರು. ಅವರ ಮುಗ್ಧತೆ ಗುಣಪಕ್ಷಪಾತಗಳು ನಮಗೆ ತುಂಬಾ ಸಂತಸ ನೀಡಿದ್ದವು. ನಮ್ಮ ಪರ್ಯಾಯಕಾಲದಲ್ಲಿ ಶ್ರೀಕ್ಷೇತ್ರ ಉಡುಪಿಗೆ ಆಗಮಿಸಿ ಶ್ರೀಕೃಷ್ಣನ ದರ್ಶನ ಪಡೆದು ಆನಂದದಿಂದ ನಮ್ಮೊಡನೆ ವ್ಯವಹರಿಸಿದ್ದನ್ನು ನಾವೆಂದೂ ಮರೆಯಲಾರೆವು. ಬದರೀಕ್ಷೇತ್ರದಲ್ಲಿ ನಮ್ಮ ಕೈಹಿಡಿದುಕೊಂಡು ಅತ್ಯಂತ ಪ್ರೀತಿಯಿಂದ ನಾರಾಯಣನ ಸಂದರ್ಶನಕ್ಕೆ ಬಂದದ್ದು ಮರೆಯಲಾಗದ ಸಂಗತಿ. ಹಳೆಯ ತಲೆಮಾರಿನ ಹಿರಿಯ ಯತಿಗಳ ವಿಯೋಗದಿಂದ ಸಮಾಜಕ್ಕೆ ಹಾಗೂ ವೈಯಕ್ತಿಕವಾಗಿ ದೊಡ್ಡ ಹಾನಿಯಾಗಿದೆ. ಅದೇ ಹಾದಿಯಲ್ಲಿ ಮುಂದುವರಿಯುತ್ತಿರುವ  ಅವರ ಉತ್ತರಾಧಿಕಾರಿಗಳಿಂದ ಹಿರಿಯ ಶ್ರೀಪಾದರ ಸಂಕಲ್ಪಗಳೆಲ್ಲವು ಪೂರ್ಣಗೊಳ್ಳಲಿದೆ ಎಂಬ ಭರವಸೆ ನಮಗೆ ಇದೆ. ಹಾಗೇ ಆಗಲೆಂದು ನಮ್ಮ ಉಪಾಸ್ಯಮೂರ್ತಿಯಾದ ಶ್ರೀಕೃಷ್ಣ–ವೇದವ್ಯಾಸ–ಮುಖ್ಯಪ್ರಾಣರಲ್ಲಿ ವಿಶೇಷವಾಗಿ ಪ್ರಾರ್ಥಿಸುತ್ತೇವೆ.

ಇತ್ಯನೇಕ ನಾರಾಯಣಸ್ಮರಣೆಗಳು

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಶ್ರೀಪಲಿಮಾರು ಮಠ, ಉಡುಪಿ**

**ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ**

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ವಿಷ್ಣು ಪುರಾಣದ ಯಮಗೀತೆಯಲ್ಲಿ ಯಮನ ಮಾತು ಹೀಗಿದೆ.

**'ಹರಿಗುರುವಶಗೋಸ್ಮಿ ನ ಸ್ವತಂತ್ರಃ'**

ನಾನು ಸ್ವತಂತ್ರನಲ್ಲ. ಹರಿಯ ವಶ. ಬ್ರಹ್ಮಾದಿಗಳ ಕೈವಶ. ಆದ್ದರಿಂದ ಸ್ವತಂತ್ರನಾದ ಹರಿಯ ಜ್ಞಾನಮಾತ್ರವೇ ಮುಕ್ತಿಯ ಹೆಬ್ಬಾಗಿಲು.

ವರ ನೀಡುವುದಾದರೆ ಕೈಯಿಂದ ಬಂದುದು ಕೈ ಜಾರದಂತಿರಬೇಕು. ಆಗ ಕೊಟ್ಟವನಿಗೂ ಸಂತೋಷ. ಸ್ವೀಕರಿಸಿದವನಿಗ ಸಂತಸ. ಆ ನಿತ್ಯಫಲ ನೀಡುವವನು ಭಗವಂತನೇ ಸರಿ. ಅವನ ಜ್ಞಾನವನ್ನೇ ವರವಾಗಿ ನೀಡು.

ಎಷ್ಟೋ ಬಾರಿ ತಿಳಿಯದ ದಾರಿಯಲ್ಲಿ ನಡೆದ ನಮಗೆ ಪುನಃ ತಿರುಗಿ ಅಲ್ಲಿಗೆ ಬಂದಂತಾಗುವುದು. ಹಾಗಾಗದಿರಲು ತಲೆ ಓಡಿಸದೆ ತಿಳಿದವರ ಜೊತೆ ನಡೆಯುವುದೇ ಸುಕ್ಷೇಮ. ಹೀಗೆಯೇ ಅಕ್ಷಯ ಆನಂದದ ಹೆಗ್ಗುರಿಗಾಗಿ ಹೆಜ್ಜೆ ಹಾಕುವ ನಾವು ಬ್ರಹ್ಮಾದಿಗಳ ದಾರಿ ಹಿಡಿಯುವುದೇ ಕ್ಷೇಮ. ಅವರಲ್ಲೇ ಬೇಡುವ ಭಗವಂತನನ್ನೇ ನಾವು ಬೇಡೋಣ ಎನ್ನುತ್ತಿದೆ 'ವರಣೀಯಃ' ಎಂಬ ಮಾತು.

**ಅಜೀರ್ಯತಾಮ್ ಅಮೃತಾನಾಂ ಉಪೇತ್ಯ ।**
**ಜೀರ್ಯನ್ ಮರ್ತ್ಯಃ ಕ್ವಾಧಸ್ಥಃ ಪ್ರಜಾನನ್ ॥**
**ಅಭಿಧ್ಯಾಯನ್ ವರ್ಣರತಿಪ್ರಮೋದಾನ್ ।**
**ಅತಿದೀರ್ಘೇ ಜೀವಿತೇ ಕೋ ರಮೇತ ॥**

ಎಲ್ಲ ಬಲ್ಲ, ಯಮನೇ, ಜೀರ್ಣವಾಗದ ಸತ್ತ್ವವುಳ್ಳ ಅಮೃತರು ಎಂದು ಖ್ಯಾತಿಹೊತ್ತ ನಿಮ್ಮ ಬಳಿ ಬಂದ, ಸಾವಿನ ಸಮೀಪದ ಈ ಅಳಿವ ಮಾನವ ಹೇಗೆ ಕನಿಷ್ಠ ಆದಾನು? ದೇಹದ ಚೆಲುವ, ವಿಷಯಾನುಭವ ಸುಖ, ಚಪ್ಪರಿಸುವ ಅಬ್ಬರದ ಸುಖ ಇವೆಲ್ಲವನ್ನೂ ಸ್ಮರಿಸುತ್ತಿರುವ ಮಾನವ ದೀರ್ಘಜೀವನದಲ್ಲಿ ಹೇಗೆ ಸುಖ ಪಟ್ಟಾನು?

ಯಮನೇ ನೀನು ದೇವತೆ, ಬಲ್ಲವನು, ನಿನ್ನ ಮುಂದೆ ಒಳಗಿನ ಬಗೆಯನ್ನು ಮುಚ್ಚಿಡಲೂ ಆಗದು–ನಾಟಕವೂ ನಡೆಯದು ನಿನ್ನಂತವರ ಬಳಿ ನೇರವಾಗಿ

ನುಡಿಯುವುದನ್ನು ಬಿಟ್ಟು ಬೇರೆ ಮಾರ್ಗ ಇರದು. 'ಪ್ರಜಾನನ್' ಎಂಬ ಮಾತಿನ ಧ್ವನಿ ಅಪಾರವಾಗಿದೆ. ಹೀಗಾಗಿ ನೇರ ನುಡಿಯುವೆ.

ನೀವು ಕುಗ್ಗದ ಉತ್ಸಾಹಿಗಳು– ಬತ್ತದ ಶಕ್ತಿ ಇರುವವರು. ಅಜೀರ್ಯ ಅನಿಸಿದವರು. ಮುಪ್ಪು–ವಾರ್ಧಕ್ಯಗಳ ಗಂಧವನ್ನೇ ಅರಿಯದ ತ್ರಿದಶರು. ಅಷ್ಟೇ ಅಲ್ಲದೆ ಮರಣವೇ ಇಲ್ಲದ ಅಮೃತರು. ನಿಮ್ಮ ವ್ಯಕ್ತಿತ್ವ ಅಪಾರ. ನಿಮ್ಮ ಬಳಿ ಬಂದಿರುವ ನಾವು ಸ್ವತಃ ಮುಪ್ಪನ್ನು ಅಪ್ಪಿಕೊಳ್ಳುವವರು. ಮೃತ್ಯುವಿನಿಂದ ನುಂಗಲ್ಪಡುವವರು. ಹೋರಾಡುವುದು ಹೆಣಗಾಡುವುದು ಕಡೆಗೊಂದು ದಿನ ಹೆಣವಾಗುವುದು ಇವೇ ನಮ್ಮ ಬದುಕು. ನಾವೆಲ್ಲಿ? ನೀವೆಲ್ಲಿ? ಇಂತಹಾ ನೀವು ನಮಗೆ ಸಿಕ್ಕಿರುವುದು ಎಂದರೆ ನಮ್ಮ ಯತ್ನ ಅಲ್ಲ. ನಮ್ಮ ಭಾಗ್ಯವೇ ಸರಿ. ಭಾಗ್ಯ ಬದುಕಿಗೆ ಬರುತ್ತಿರುವಾಗ ಬಾಗಿಲು ಹಾಕಲಾದೀತೆ? ಆದ್ದರಿಂದ ನಿಮ್ಮ ಬಳಿ ಬಂದ ನಾನು ಕನಿಷ್ಠ ಆಗಲಿಲ್ಲ. ಮಹಾತ್ಮನೇ ಆದಂತೆ.

Luxuries ಸಿಗಲಿಲ್ಲ ಎಂಬ ಸಂಕಟ ನನಗಿಲ್ಲ. ಆಯುಸ್ಸು ದಕ್ಕಲಿಲ್ಲ ಎಂಬ ದುಗುಡ ಚೂರೂ ಇಲ್ಲ. ಚೆಲ್ಲುವ ಮೈಕಾಂತಿ ತುಂಬಿ ತುಳುಕುವ ತಾರುಣ್ಯ. ವಿಷಯ ಸುಖ ಇವೆಲ್ಲ ಯೌವ್ವನದಲ್ಲಿ ಜೀವನ ಹಾಯ್ ಹಾಯ್ ಎನಿಸುವಷ್ಟು. ಆದರೆ ಬಳುಕುವ ದೇಹ ಬಳುಕು ಆದಾಗ ಎಂತಹಾ ಇಕ್ಕಟ್ಟು? ಎದುರಿಗೆ ಕುಣಿವ ದಂಪತಿಗಳನ್ನು, ಚೆಲ್ಲಾಟದ ಯುವಕರನ್ನು, ಹೊಸ ಸಾಮಗ್ರಿಗಳನ್ನೂ ಕಂಡಾಗ, ಮುದುಕರಿಗೆ ಆಗುವ ಮುಜುಗರ ಲೆಕ್ಕಕ್ಕೆ ಸಿಗುವುದೇ? ದೀರ್ಘ ಜೀವನ ಪರದಾಟ–ಪೇಚಾಟಗಳಿಗೆ ಒಯ್ಯುವುದೇ ವಿನಃ ಸಂತಸ ತಂದೀತೆ? 'ದೀರ್ಘಜೀವನದಲ್ಲಿ ಪರದಾಡದವರು ಯಾರು? ಎಂಬ ಮಾತು ಎಷ್ಟು ಸತ್ಯ?

ಆಗ ದೇಹದಲ್ಲಿ ಶಕ್ತಿ ಇಲ್ಲ. ಜೇಬಿನಲ್ಲಿ ದುಡ್ಡು ಇಲ್ಲ. ಕಾಲು ಓಡದು. ಕಾಲ ಓಡುತ್ತಿರುತ್ತದೆ. ಆಗ ಆಗುವ ದುಃಖ ಲೆಕ್ಕಕ್ಕೆ ಸಿಗುವುದೇ? ಅದಕ್ಕಾಗಿ ಬಾಸಕವಿಯ ಮಾತು ಮನನೀಯ.

**ಚಿರಜೀವಿದೋಷೈಃ ಜೀವಾಮಿ ಶೂನ್ಯಸ್ಯ ರಥಸ್ಯ ಸೂತಃ**

ಗುಣ ಇವ ಬಹ್ವಪರಾದ್ಧಮಾಯುಷಾ ಮೇ–ನನ್ನ ಆಯುಸ್ಸು ಕಷ್ಟ ಅಷ್ಟೇ ಏಕೆ? ಕಣ್ಣು ಕಾಣಿಸದು. ಕಿವಿಯು ಕೇಳಿಸದು. ಹೇಳುವವರಿಗೆ ತನಗೆ ಇನ್ನೂ ಅಸ್ಪಷ್ಟ. ಬಾಯಿಯಲ್ಲಿ ಹಲ್ಲುಗಳು ಇಲ್ಲ. ಜೊಲ್ಲು ಸುರಿಯುತ್ತದೆ. ಮಾತಿಗಿಂತ ಎಂಜಲೇ ಬಹಳ. ಆಗ ಎದುರಿಗಿರುವ ಮಗನೂ ಎಂಜಲು ಎರಚೀತೆಂದು ದೂರ ನಿಂತಾನು. ಮುಪ್ಪು ಕಷ್ಟಗಳ ತವರು ಎಂದಿದ್ದಾನೆ ಕವಿಯೊಬ್ಬ..ಆದ್ದರಿಂದ ದೀರ್ಘಜೀವನ ಬೇಡ, ಸಾರ್ಥಕಜೀವನ ಬೇಕು.

**(ಮುಂದುವರಿಯುವುದು)**

ಬಹುಸಜ್ಜನರ ಮಾರ್ಗವನ್ನಾಶ್ರಯಿಸಿ.

(ಸ್ತೋತ್ರ ಚಿಂತನೆ)

ಭಾಗ–9

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

ಸಮಗ್ರ ಕಾಠಕೋಪನಿಷತ್ತಿನ ದೇವತೆ ವಾಮನ. ಆ ವಾಮನನ ಬಗ್ಗೆ ಶ್ರೀಮದಾಚಾರ್ಯರು ಹೇಳುವ ಮಾತೊಂದಿದೆ.

**ಊರ್ಧ್ವಂ ಪ್ರಾಣಂ ಉನ್ನಯತಿ ಅಪಾನಂ ಪ್ರತ್ಯಗಸ್ಯತಿ ।**

**ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತೇ ॥** ಎಂದು

ನಮ್ಮ ಶರೀರದಲ್ಲಿ ವಾಯು ಸಂಚಾರವಾಗುತ್ತದೆ. ಸದಾ ತಿರ್ಯಕ್ ಗಮನವುಳ್ಳ (ಅಡ್ಡ ಸಂಚಾರ) ವಾಯುದೇವನ ಗತಿ ನಮ್ಮೆಲ್ಲರ ಶರೀರದಲ್ಲಿ ವಿಶಿಷ್ಟವಾಗಿದೆ. ಈ ಭೂತವಾಯುವನ್ನು ನಿಯಂತ್ರಿಸುವವ ವಾಮನ. ಆದ್ದರಿಂದಲೇ ಸೆಳೆದ ಗಾಳಿಯ ಒಂದು ಭಾಗವನ್ನು ಪ್ರಾಣವಾಯುವನ್ನಾಗಿಸಿ ಮೇಲ್ಮುಖಕ್ಕೆ ಕೊಂಡೊಯ್ಯುತ್ತಾನೆ. ಮತ್ತೊಂದು ಭಾಗವನ್ನು ಕೆಳಮುಖವಾಗಿ ಅಪಾನವಾಯುವನ್ನಾಗಿ ಪರಿವರ್ತಿಸಿ ದೇಹಧಾರಕನಾಗಿದ್ದಾನೆ. ಪ್ರಾಣನನ್ನೂ ಸಲಹುವ ದೇವ ವಾಮನ ಇಲ್ಲಿ ವಾಮ ಎಂದರೆ ಸುಂದರನಾದ ಮುಖ್ಯಪ್ರಾಣ ಅವನನ್ನು **'ನಯತಿ'** ಚೆನ್ನಾಗಿ ಹಂಸಮಂತ್ರದ ಮೂಲಕ ಪ್ರೇರಿಸುತ್ತಾನೆ. ಆದ್ದರಿಂದ **'ವಾಮಂ ನಯತಿ ಇತಿ ವಾಮನಃ'** ಇಂತಹ ವಾಮನನನ್ನು ವಿಶ್ವೇದೇವತೆಗಳು ಸರ್ವದಾ ಉಪಾಸನೆ ಮಾಡುತ್ತಿದ್ದಾರೆ. ಆದ್ದರಿಂದ ಬ್ರಹ್ಮಾಂಡದಲ್ಲಿ ವ್ಯಾಪಿಸಿದ ವಾಮನ ಪಿಂಡಾಂಡದಲ್ಲಿಯೂ ವ್ಯಾಪಿಸಿದ್ದಾನೆ.

ಈ ವಾಮನನು ಬಲಿಯ ಬಳಿ ಮೂರು ಪಾದ ಬೇಡಿದ. ಎರಡು ಪಾದದಿಂದ 14 ಲೋಕವನ್ನು ಅಳೆದ. ಅಳೆಯುವ ಕ್ರಮ ಬಹಳ ಸೊಗಸು. ಭೂಮಿಯಿಂದ ಕೆಳಗೆ 7 ಲೋಕ ಅಳೆದ. ಭೂಮಿಯಿಂದ ಮೇಲೆ 7 ಲೋಕ ಅಳೆದ. ಈ ವಾಮನನ ಕ್ರಿಯೆ ನಿತ್ಯವೆಂದು ಚಿಂತಿಸಬಹುದು. ವಾಮನ ಒಂದು ಪಾದವನ್ನು ಕೆಳಕ್ಕೆ ಒತ್ತುತ್ತಾನೆ. ಮತ್ತೊಂದು ಪಾದವನ್ನು ಮೇಲಕ್ಕೆ ಎತ್ತುತ್ತಾನೆ. ಹೀಗೆ ಉಸಿರಾಟದಲ್ಲಿಯೇ ವಾಮನನ ಪಾದವಿನ್ಯಾಸದ ಸೊಗಸು ತಿಳಿಯುತ್ತದೆ. ಮೂರನೇ ಪಾದವನ್ನು ಬಲಿಗೆ ಕೊಟ್ಟ. ಅಂದರೆ ಯಾರು ಶ್ರೀಹರಿಯ ಪ್ರಾಣ–ಅಪಾನ ನಿಯಾಮಕತ್ವ ವ್ಯಾಪಾರವನ್ನು ಸರಿಯಾಗಿ ತಿಳಿಯುತ್ತಾರೋ ಅಂತಹ ಜೀವರಿಗೆ ತನ್ನ ಮೂರನೇ ಪಾದವನ್ನು ಕೊಡುತ್ತಾನೆ. ಪಿಂಡಾಂಡದಲ್ಲಿ ನಾಭಿಯಿಂದ

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**

ಕೆಳಭಾಗದಲ್ಲಿ ಕೆಳಗಿನ ಏಳು ಲೋಕಗಳನ್ನು; ನಾಭಿಯಿಂದ ಮೇಲ್ಭಾಗದಲ್ಲಿ ಊರ್ಧ್ವ ಲೋಕಗಳನ್ನು ಚಿಂತಿಸಬೇಕೆಂದು ಭಾಗವತ ದ್ವಿತೀಯ ಸ್ಕಂಧದಲ್ಲಿ ತಿಳಿಸಿದೆ. ಅದಕ್ಕನುಗುಣವಾಗಿ ವಾಮನನ ವ್ಯಾಪಾರವು.

ಈ ವಾಮನನು ಸ್ಥಳದಲ್ಲಿದ್ದು ಹೇಗೆ ರಕ್ಷಿಸುತ್ತಾನೆ! ಎಂಬ ಜಿಜ್ಞಾಸೆ ಜಿಜ್ಞಾಸುಗಳಿಗೆ ಸಹಜ. ಅದಕ್ಕೆ ಉತ್ತರವಿಷ್ಟೇ. ನಾವು ನಿತ್ಯವಾಸಿಸುವುದು ಸ್ಥಳದಲ್ಲಿಯೇ ಹೊರತು ಜಲದಲ್ಲಿ ಅಲ್ಲ. ಆದರೂ ಕೇವಲ ಬಂಜರು ಭೂಮಿಯಲ್ಲಿ ವಾಸಿಸೆವು. ಜಲ ಯುಕ್ತವಾದ ಸ್ಥಳದಲ್ಲಿ ವಾಸ ಇದನ್ನೇ **'ಸ್ಥಲೇ ಚ'** ಎಂದರು. ನೀರಿರುವ ಸ್ಥಳವೇ ಸ್ಥಳ. ಮನೆ ಕಟ್ಟುವ ಮುನ್ನ ಆ ಸ್ಥಳದಲ್ಲಿ ನೀರಿದೆಯೇ ಎಂದು ಪರೀಕ್ಷಿಸಿಯೇ ಸ್ಥಳ ಪಡೆಯುವ ಕ್ರಮ. **'ಭೂಮಿಂ ತೇ ವಾಮನೋ ದದ್ಯಾತ್'** ಎಂಬಂತೆ ಭೂಮಿಯನ್ನೇನೋ ವಾಮನನ ದಯೆಯಿಂದ ಪಡೆದೆವು ಎಂದಿಟ್ಟುಕೊಳ್ಳಿ. ಇಲ್ಲಿಗೆ ನಮ್ಮ ಸಮಸ್ಯೆ ಮುಗಿಯದು. ಯಾರೋ ಮನೆಯ ವಾಸ್ತುವನ್ನು ಪರಿಶೀಲಿಸಿ ಬೇಡವಾದ ಅನಿಷ್ಟದ ಎರಡು ಮಾತುಗಳನ್ನು ಹೇಳುತ್ತಾರೆ. ಅಂದಿನಿಂದ ನಮ್ಮ ನೆಮ್ಮದಿ ಇದ್ದದ್ದೂ ಹಾಳಾಗುತ್ತದೆ. 'ಮನೆಯ ವಾಸ್ತು ಸರಿ ಇಲ್ಲ!' ಎಂದು. ದೇವಲೋಕದಿಂದ ದೂಡಲ್ಪಟ್ಟ ವಾಸ್ತುಪುರುಷ ಚೌಕಾಕಾರದಲ್ಲಿ ಭೂಮಿಗೆ ಬಿದ್ದಿದ್ದಾನಂತೆ. ಅವನ ಆಕಾರಕ್ಕೆ ಸರಿಯಾಗಿ ಮನೆ ಕಟ್ಟಿದಲ್ಲಿ ನೆಮ್ಮದಿ ನೀಡುತ್ತಾನಂತೆ. ಇಲ್ಲವಾದಲ್ಲಿ ನೆಮ್ಮದಿ ಹಾಳು ಮಾಡುತ್ತಾನೆ ಎಂಬುದು ಸತ್ಯದ ಸಂಗತಿಯಾದರೂ ಈಗಾಗಲೆ ಮನೆಕಟ್ಟಿದವರು ನಿರಂತರ ಭಯಗ್ರಸ್ತರಾಗುತ್ತಾರೆ. ಆಪತ್ತುಗಳನ್ನು ಚಿಂತಿಸುತ್ತಾ ಮನೋರೋಗಿಗಳಾಗುವ ಸಾಧ್ಯತೆ ಇದೆ. ಅಂಥವರ ಮನ ಕೆಡಿಸಿಕೊಳ್ಳುವುದು ಬೇಡ. ಅದಕ್ಕೆ ವಾಮನನ ಸ್ತೋತ್ರ ಸಾಕು. ತಂತ್ರಸಾರ ಸಂಗ್ರಹದಲ್ಲಿ ಶ್ರೀಮದಾಚಾರ್ಯರು ಹೇಳಿಕೊಟ್ಟ ವಾಮನನ ಧ್ಯಾನದಿಂದ ಸಕಲ ಗೃಹೋಪದ್ರವಗಳೂ ನಾಶವಾಗುತ್ತದೆ.

**ಧ್ಯಾಯೇತ್ ಸುಶುಕ್ಲಮರವಿಂದದಲಾಯತಾಕ್ಷಂ**
**ಸೌವರ್ಣಪಾತ್ರದಧಿಭೋಜ್ಯಮಥಾಮೃತಂ ಚ ।**
**ದೋರ್ಭ್ಯಾಂ ದಧಾನಮಖಿಲೈಶ್ಚ ಸುರೈಃ ಪರೀತಂ**
**ಶೀತಾಂಶುಮಂಡಲಗತಂ ರಮಯಾ ಸಮೇತಮ್ ॥**

ಶುಭ್ರವರ್ಣದವ, ತಾವರೆಯ ದಳದಂತೆ ನೀಳವಾದ ಕಣ್ಣುಗಳುಳ್ಳವ; ಬಂಗಾರದ ಬಟ್ಟಲಿನಲ್ಲಿ ಮೊಸರನ್ನು ಮತ್ತು ಅಮೃತಕಲಶಗಳನ್ನು ತನ್ನೆರಡು ಕೈಗಳಲ್ಲಿ ಧರಿಸಿರುವ, ಸಕಲ ದೇವತೆಗಳೊಂದಿಗೆ ಚಂದ್ರಮಂಡಲದಲ್ಲಿ ಆಸೀನನಾದ, ರಮಾಸಹಿತ ಶ್ರೀಹರಿಯನ್ನು ಧ್ಯಾನಿಸಬೇಕು. **(ಸಶೇಷ)**

**ವೇದ-ಇತಿಹಾಸ-ಪುರಾಣಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ**

# ಜೀವನಯಜ್ಞ

## ಸ್ಥೂಲಶರೀರಚಿಂತನಯಜ್ಞ

ಸಂಕಲನ: ಸುನಂದಕೀ

ಭಗವಂತನು ಭಾಗವತಧರ್ಮ, ಜ್ಞಾನ ಮತ್ತು ಫಲಗಳಿಗೆ ಅಧಿಕಾರಿಯಾದ ಜೀವನನ್ನು ಆರಂಭಿಸಿ ಬ್ರಹ್ಮದೇವರವರೆಗೆ ದ್ರವ್ಯ, ಜ್ಞಾನ, ಪ್ರಯತ್ನಾದಿಗಳ ತಾರತಮ್ಯವನ್ನು ಅನುಸರಿಸಿ ಉತ್ಕೃಷ್ಟರಾದವರಿಗೆ ಅಧಿಕ ಫಲವನ್ನು ನೀಡಲು ಶರೀರದಲ್ಲಿ ಬ್ರಹ್ಮಾದಿದೇವತೆಗಳ ಪ್ರವೇಶವನ್ನು ಮಾಡಿಸಿ ಹಾಗೆಯೇ ತದ್ವಿಪರೀತ ಫಲಭಾಗಿಗಳಾದ ಕಲಿಪರ್ಯಂತ ದೈತ್ಯರಿಗೆ ಅಧಿಕ ಫಲವನ್ನು ಕೊಡಲು ಶರೀರದಲ್ಲಿ ಪ್ರವೇಶಮಾಡಲು ಅವರಿಗೂ ಆಜ್ಞೆಯಿತ್ತನು. ಆ ಶರೀರದಲ್ಲಿ ಬ್ರಹ್ಮಾದಿದೇವತೆಗಳು ಯಾವ ರೀತಿ ಮಹದಾದಿತತ್ವಗಳನ್ನು ಪ್ರವೇಶಿಸಿದರೋ ಅದೇ ರೀತಿ ದೈತ್ಯರೂ ಕೂಡ 'ದೀನತ್ವಾತ್–ದೇವನಾಮಾನಃ' ಎಂಬಂತೆ ಬ್ರಹ್ಮೇಂದ್ರಾದಿಗಳ ಹೆಸರುಗಳನ್ನೇ ತಾವಿಟ್ಟುಕೊಂಡು ತಮ್ಮ ತಮ್ಮ ತತ್ವಗಳನ್ನು ಪ್ರವೇಶಿಸಿದರು.

ಅನಂತರ ಭಗವಂತನು ವಜ್ರವೈಢೂರ್ಯ ಮೊದಲಾದ ನಾನಾ ಮಣಿಗಣಖಚಿತ ಪ್ರತಿಮೆಯಲ್ಲಿ ಹೇಗೋ ಹಾಗೆಯೇ ನಾನಾ ವರ್ಣವಿಶಿಷ್ಟಗಳಿಂದ ಉಜ್ವಲವಾದ ತಮ್ಮ ತಮ್ಮ ಮೂರ್ತಿಗಳಿಂದ ವಿಶಿಷ್ಟವಾದ ಜೀವಶರೀರದಲ್ಲಿ ಬ್ರಹ್ಮಾದಿ ಪುಷ್ಕರಾಂತ ದೇವತೆಗಳನ್ನು ಹಾಗೂ ಅವರ ಶತ್ರುಗಳಾದ ದೈತ್ಯರನ್ನು ಪ್ರವೇಶಮಾಡಿಸಿ ಪ್ರಸವಕಾಲವು ಸಮೀಪಿಸುತ್ತಿರಲು ಜೀವನನ್ನು ಗರ್ಭಾಶಯದಿಂದ ಹೊರಗೆ ಹಾಕಲು ಅಪಾನರೂಪಿ ವಾಯುದೇವರನ್ನು ಆಜ್ಞಾಪಿಸಲು, ಆ ವಾಯುದೇವರು 'ಸೂತಿಕಾವಾಯು' ವೆಂಬ ತನ್ನ ಅಂಶದಿಂದ ಗರ್ಭವನ್ನು ತಾಯಿಯ ಶರೀರದಿಂದ ಹೊರಗೆ ಹಾಕಿದರು. ಆ ವಾಯುವೇಗಾತಿಶಯದಿಂದ ಗರ್ಭಸ್ಥನಾದ. ಜೀವನು ಗರ್ಭಕೋಷ್ಠವನ್ನು ತ್ಯಜಿಸಿ ಕ್ರಮವಾಗಿ ಕೆಳಗಡೆ ಇಳಿದು ಯೋನಿದ್ವಾರಕ್ಕೆ ಬಂದು ಕಬ್ಬಿನ ಗಾಣದಂತೆ ಯೋನಿಯಿಂದ ಹೊರಟು ಬಹಳ ಆಯಾಸಗೊಂಡು ಭೂಮಿಯಲ್ಲಿ ಬಿದ್ದು ಕ್ಷಣ ಮಾತ್ರದಲ್ಲಿ ಬಾಹ್ಯವಾಯುಸ್ಪರ್ಶದಿಂದ ಸ್ವಲ್ಪ ಚೇಷ್ಟಾಯುಕ್ತನಾಗುವನು. ಇದು ಶ್ರೀಹರಿಗೆ ಎರಡನೆಯ ಜನ್ಮವೆಂದು ತಿಳಿಯಬೇಕು.

ಈ ರೀತಿ ಪಿತೃವಿನಲ್ಲಿದ್ದು ಭಗವಾನ್ ಪ್ರದ್ಯುಮ್ನನು ಜೀವನಿಗೋಸ್ಕರವಾಗಿ ಕರ್ಮವನ್ನು ಮಾಡಲು ಈ ರೂಪವನ್ನು ಅಸ್ವೀಕರಿಸಿ ಪಿತೃಮರಣಾನಂತರ ಪಿತೃವು ಬೇರೆ ಕಡೆಯಲ್ಲಿ ಜನ್ಮವನ್ನು ಹೊಂದಿದಾಗ ಪಿತೃವಿನ ಜೊತೆಯಲ್ಲಿಯೇ ತಾನೂ ಪ್ರಾದುರ್ಭಾವನ್ನು

ಮನೆಯ ಮುಂದೆ ಶ್ರೀತುಳಸಿಯ ವನ ಕಂಗೊಳಿಸುತ್ತಿರಲಿ

ಹೊಂದುತ್ತಾನೆ. ಇದು ಭಗವಂತನಿಗೆ ತೃತೀಯ ಜನ್ಮ ಎಂದು ಅನುಸಂಧಾನಿಸಬೇಕು.

ಆದ್ದರಿಂದಲೇ ಜ್ಞಾನಿಗಳು ಭೂಮಿಯಲ್ಲಿ ನಡೆದ ಪುತ್ರ ಜನ್ಮ ವಾರ್ತೆಯನ್ನು ಕೇಳಿ ಪರಮ ಸಂಭ್ರಮದಿಂದ ವಾದ್ಯಘೋಷಗಳಿಂದ, ಗೋ–ಭೂ–ವಸ್ತ್ರಾಲಂಕಾರಾದಿ ದಾನಗಳಿಂದ ಸಂತುಷ್ಟರನ್ನಾಗಿ ಮಾಡಿದ ವಿಪ್ರವರ್ಯರ ಆಶೀರ್ವಚನಗಳಿಂದ ಲಾಜ–ಮಂತ್ರಾಕ್ಷತಾದಿಗಳಿಂದಲೂ ಮಹೋತ್ಸವವನ್ನು ಆಚರಿಸುತ್ತಾರೆ. ಅಜ್ಞ ಜನರು ಕೇವಲ ಪುತ್ರಜನ್ಮವೆಂದೇ ತಿಳಿದು ಈಗ ಇರುವ ಪದ್ಧತಿಯಂತೆ ಪರಂಪರಾಗತ ಉತ್ಸವನ್ನು ಆಚರಿಸುತ್ತಾರೆ.

ಇನ್ನೊಂದು ವಿಶೇಷವೆಂದರೆ ಕೇವಲ ಭಗವಂತನು ಜನ್ಮ ತಾಳುವುದಲ್ಲ. ಅವನು ತನ್ನ ಪೂಜಾತ್ಮಕವಾದ ಪುರುಷಯಜ್ಞವನ್ನು ಹುಟ್ಟಿಸಿದನು ಎಂದು ಭಾವಿಸಬೇಕು. ಇದರಿಂದ ಜೀವನು ತನ್ನಲ್ಲಿ ಭಗವತ್ ಪೂಜಾತ್ಮಕವಾದ ಯಜ್ಞರೂಪವನ್ನು ಚಿಂತಿಸಬೇಕು. ಈ ರೀತಿಯ ಚಿಂತನೆ–ಅನುಸಂಧಾನಗಳನ್ನು ಭಗವಂತನು ಯಾವಾಗ ನಮಗೆ ದಯಪಾಲಿಸುತ್ತಾನೋ ಆ ಕಾಲದಲ್ಲಿಯೇ ಹಿಂದೆ ಬಂದಿರುವ ಎಲ್ಲ ದೇಹಗಳಿಗೆ ಮುಂದೆ ಬರಲಿರುವ ಎಲ್ಲ ದೇಹಗಳಿಗೂ ಇದೇ ರೀತಿ ಅನುಸಂಧಾನವನ್ನು ಮಾಡಬೇಕು. ಇದರಿಂದ ನಮ್ಮ ಸರ್ವಜನ್ಮಗಳೂ ಭಗವಂತನ–ಪೂಜೆಯೇ ಆಗುವುದು.

**(ಸಶೇಷ)**

---

**ಅಂತರ್ಜಾಲದಲ್ಲಿ ನಿರಂತರ ಪ್ರವಚನ–ನೇರಪ್ರಸಾರ**

ಮಹಾಭಾರತ, ರಾಮಾಯಣ, ಭಗವದ್ಗೀತೆ, ಹರಿಕಥಾಮೃತಸಾರ– ವಿಷಯಗಳ ಬಗ್ಗೆ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಪ್ರವಚನಗಳಿಗಾಗಿ ಶ್ರೀಮಠದ ಅಂತರ್ಜಾಲವನ್ನು ಸಂಪರ್ಕಿಸಿ. ಪ್ರಯಾಗದಿಂದ **ಕಲ್ಪವಾಸದ** ವಿಶೇಷವಾದ ನೇರಪ್ರಸಾರದ ಪ್ರವಚನವನ್ನು ಇಲ್ಲಿ ಕೇಳಬಹುದು.

**www.livepravachana.com**

(**ವಿ.ಸೂ.** ಈ ತಾಣದಲ್ಲಿ ಪ್ರವಚನ ನಿರ್ದಿಷ್ಟ ದಿನ ಹಾಗೂ ಸಮಯದಲ್ಲಿ ನೇರವಾಗಿ (**live**) ಕೇಳಬಹುದು).

**ಎಂದಿಗೂ ನಾಸ್ತಿಕರಾಗಬೇಡಿ; ನಾಸ್ತಿಕವಾದಕ್ಕೆ ತಲೆಬಾಗಬೇಡಿ**

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

## ಬಲದೇವನ ತೀರ್ಥಯಾತ್ರೆ

ಕೌರವ ಪಾಂಡವರೊಳಗೆ ಯುದ್ಧ ನಿಶ್ಚಯವಾದಾಗ ಉಭಯರಲ್ಲೂ ಉದಾಸೀನ ಭಾವವನ್ನು ತಾಳಿದ ಬಲರಾಮನನ್ನು ತಾನು ಆ ಸಮಯದಲ್ಲಿ ದ್ವಾರಕೆಯಲ್ಲಿರದೆ ತೀರ್ಥಯಾತ್ರೆ ಕೈಗೊಂಡ ಆ ವೇಳೆಯಲ್ಲಿ ಮದಿರೆ ಸೇವಿಸಿ ಉನ್ಮತ್ತನಾಗಿ ಅಲ್ಲೇ ನಡೆಯುತ್ತಿದ್ದ ಬ್ರಹ್ಮಸತ್ರವನ್ನು ಪ್ರವೇಶಿಸಿದ. ಅಲ್ಲಿದ್ದ ಋಷಿಗಳೆಲ್ಲಾ ಪಾನ ಮಾಡಿ ತೂರಾಡುತ್ತಿದ್ದ ಅವನ ಸ್ಥಿತಿಯಿಂದ ಭೀತರಾಗಿ ಎದ್ದು ನಿಂತು ಮರ್ಯಾದೆ ಸಲ್ಲಿಸಿದರು. ಆದರೆ ಬ್ರಹ್ಮಾಸನವನ್ನಲ್ಲಂಕರಿಸಿದ್ದ ರೋಮಹರ್ಷಣ ಸೂತ ತಾನು ಹಾಗೆಯೇ ಕುಳಿತಿರಲು ರೋಷಗೊಂಡ ಬಲರಾಮ ಅವನನ್ನು ಕೆಡವಿಕೊಂದ. ಬ್ರಹ್ಮಸಭೆ ಈ ಘಟನೆಯಿಂದ ಚೆಲ್ಲಾಪಿಲ್ಲಿಯಾಗಿ ಓಡಿತು. ಮತ್ತೆ ಎಚ್ಚತ್ತ ಬಲದೇವ ತಾನು ಮಾಡಿದ ಅಪರಾಧಕ್ಕೆ ಪ್ರಾಯಶ್ಚಿತ್ತವಾಗಿ ತೀರ್ಥಯಾತ್ರೆಯನ್ನು ಕೈಗೊಂಡ.

## ಲೋಕನಾಥರ ಮಕ್ಕಳ ದುರ್ಮರಣ

ಅಯೋಧ್ಯಾಪುರದರಸ ಹರಿಶ್ಚಂದ್ರ ಪ್ರಜಾರಕ್ಷಣದೀಕ್ಷಿತ. ಅವನೊಮ್ಮೆ ಬೇಟೆಗೆ ಬಂದಾಗ ಹೆಣ್ಣಿನ ಆಕ್ರಂದನ ಕೇಳಿಸಿತು. ತನ್ನ ಆಳ್ವಿಕೆಯಲ್ಲಿ ಇಂತಹ ಹೀನ ಸ್ಥಿತಿ ಯಾರಿಗೆ ಯಾರಿಂದ ಎಂದು ಧನುಷ್ಪಾಣಿಯಾಗಿ ಶಬ್ದ ಕೇಳುವಲ್ಲಿಗೆ ಬಂದ. ಹೆಣ್ಮಗಳ ಸೆರಗಿಗೆ ಬೆಂಕಿ ಕೊಟ್ಟ ಮೂರ್ಖ ಯಾರು? ನಾನೇ ರಾಜನಾಗಿರುವಾಗ ಇಂತಹ ನೀಚ ಕೆಲಸವನ್ನು ಮಾಡಿದವ ಜೀವದಾಸೆಯನ್ನು ತೊರೆದವನೇ ಸರಿ! ಈ ಮಾತು ವಿಶ್ವಾಮಿತ್ರರಿಗೆ ಕೇಳಿಸಿತು. ರೋಷಾವಿಷ್ಟರಾಗಿ ಹರಿಶ್ಚಂದ್ರನಿಗೆ ಕಾಣಿಸಿಕೊಂಡರು. ಹರಿಶ್ಚಂದ್ರ ಬೆವತು ಹೋದ. ಬಿಲ್ಲು ಹಿಡಿದ ನಾನು ನನ್ನ ಕರ್ತವ್ಯದಿಂದ ಹೀಗಾಡಿದೆ ದಾನ, ರಕ್ಷಣೆ, ಹೋರಾಟ ಕ್ಷತ್ರಿಯನಾದ ನನ್ನ ವ್ರತ.

**ವಿಶ್ವಾಮಿತ್ರ:** ಯಾರಿಗೆ ದಾನ, ಯಾರು ರಕ್ಷಿಸಲ್ಪಡುವವರು, ಯಾರೊಂದಿಗೆ ಯುದ್ಧ.

**ಹರಿಶ್ಚಂದ್ರ:** ವಿಪ್ರರಿಗೆ ದಾನ. ಆರ್ತರು ರಕ್ಷ್ಯರು. ಶತ್ರುಗಳೊಂದಿಗೆ ಯುದ್ಧ.

**ವಿಶ್ವಾಮಿತ್ರ:** ಸರಿಯಾಗಿ ಹೇಳಿದೆ. ಭೇಷ್! ಹಾಗಾದರೆ ನಾನು ಬ್ರಾಹ್ಮಣ ಕೊಡೆನಗೆ ಇಷ್ಟ ದಕ್ಷಿಣೆ

ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ

**ಹರಿಶ್ಚಂದ್ರ:** ನಿಃಶಂಕೆಯಿಂದ ಅಪ್ಪಣೆಯಾಗಲಿ. ಯಾವ ತ್ಯಾಗಕ್ಕೂ ನಾನು ಸಿದ್ಧ.

**ವಿಶ್ವಾಮಿತ್ರ:** ಪ್ರಥಮವಾಗಿ ನನಗೆ ರಾಜಸೂಯ ಯಾಗದ ದಕ್ಷಿಣೆ ಕೊಡು.

**ಹರಿಶ್ಚಂದ್ರ:** ಇದೋ ದತ್ತಂ ನಮಮ

**ವಿಶ್ವಾಮಿತ್ರ:** ನಿನ್ನ ಭಾರ್ಯೆ, ಮಗ ಇವರನ್ನುಳಿದು ಸಾಗರಾಂತವಾದ ನಿನ್ನ ರಾಜ್ಯ, ಕೋಶಸೇನೆ ಸರ್ವವೂ ನನ್ನದಾಗಲಿ.

**ಹರಿಶ್ಚಂದ್ರ:** ತಥಾಸ್ತು ದತ್ತಂ ನಮಮ

**ವಿಶ್ವಾಮಿತ್ರ:** ರಾಜ್ಯ ಸೂತ್ರ ನಿನ್ನ ಕೈಯಲ್ಲಿದೆ ತಾನೆ? ಹಾಗಾದರೆ ಈಗ ಪ್ರಭು ಯಾರು?

**ಹರಿಶ್ಚಂದ್ರ:** ನೀವೇ.

**ವಿಶ್ವಾಮಿತ್ರ:** ನಿನ್ನ ರಾಜೋಚಿತ ಭೂಷಣ ತೆಗೆದಿಡು. ನಾರುಡೆ ಉಡು.

ಹರಿಶ್ಚಂದ್ರ ಪತ್ನಿ ಪುತ್ರ ಸಮೇತನಾಗಿ ನಾರುಡೆಯುಟ್ಟು ವನಾಧಿಗಮನಕ್ಕೆ ನಿಂತ.

**ವಿಶ್ವಾಮಿತ್ರ:** ಎಲ್ಲಿ ಹೊರಟೆ. ದಾನಕ್ಕೆ ದಕ್ಷಿಣೆ ಕೊಡಬೇಕು.

**ಹರಿಶ್ಚಂದ್ರ:** ಎಲ್ಲವನ್ನು ಅರ್ಪಿಸಿದ ಬಳಿಕ ನನ್ನಲ್ಲಿ ಇನ್ನೇನಿದೆ. ಈಗಿರುವುದು ನಾನು, ನನ್ನ ಹೆಂಡತಿ. ಮಗ ರೋಹಿತ.

**ವಿಶ್ವಾಮಿತ್ರ:** ಕೊಟ್ಟ ಭಾಷೆಗೆ ತಪ್ಪಿ ನಡೆದರೆ ಕೇಡು ತಪ್ಪಿದ್ದಲ್ಲ. ಕೊಡುವೆನೆಂದು ಹೇಳಿ ಕೊಡಬೇಕು. ಶತ್ರುಗಳೊಂದಿಗೆ ಹೋರಾಡಬೇಕು.

ಆರ್ತರನ್ನು ರಕ್ಷಿಸಬೇಕೆಂದು ಹೇಳಿದವ ನೀನು. ಎಷ್ಟು ಕೊಟ್ಟರೆ ಬ್ರಾಹ್ಮಣ ತುಷ್ಟನಾಗುತ್ತಾನೋ ಅಷ್ಟು ಕೊಡುವುದೇ ರಾಜಸೂಯ ದಕ್ಷಿಣೆ. ಅದನ್ನು ಕೊಡುವೆನೆಂದು ಹೇಳಿ ಕೊಡದಿದ್ದಲ್ಲಿ ವಚನ ಭ್ರಷ್ಟನಾಗುವಿ. ನರಕಕ್ಕೆ ಭಾಗಿಯಾಗುವಿ. ನನ್ನ ಶಾಪಕ್ಕೆ ಗುರಿಯಾಗುವಿ ಜೋಕೆ!

**ಹರಿಶ್ಚಂದ್ರ:** ಕ್ಷಮಿಸಿ ಖಂಡಿತ ಕೊಡುತ್ತೇನೆ. ಕಾಲಾವಕಾಶ ಬೇಕು.

**ವಿಶ್ವಾಮಿತ್ರ:** ಎಷ್ಟು?

**ಹರಿಶ್ಚಂದ್ರ:** ಒಂದು ತಿಂಗಳು

**ವಿಶ್ವಾಮಿತ್ರ:** ಆಗಲಿ ನಿನಗೆ ಒಳ್ಳೆಯದಾಗಲಿ.

ನಿಮ್ಮದಾಗಿಸಿಕೊಳ್ಳಿ ಎಂದಾಗ ರೋಹಿತನಿಗೂ ಕ್ರಯಕೊಟ್ಟು ತಾಯಿ ಮಗುವನ್ನು ಕರೆದುಕೊಂಡು ಹೋದ. ಈ ಕರುಳು ಹಿಂಡುವ ದೃಶ್ಯವನ್ನು ನೋಡಿ ಹರಿಶ್ಚಂದ್ರ ಚಿಂತಿಸಿದ.

ಮಡದಿ ಶೈಬ್ಯೆ, ಪುತ್ರ ರೋಹಿತರೊಂದಿಗೆ ವಲ್ಕಲಾಂಬರವನ್ನುಟ್ಟು ರಾಜ್ಯದಿಂದ ಹೊರಟ. ರಾಜನ ಹಿಂದೆ ಪ್ರಜಾಗಡಣವೂ ಹೊರಟು ನಿಂತಿತು. ಪಿತೃಸದೃಶನಾದ

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ**

ಧರ್ಮಾತ್ಮನಾದ ರಾಜನ ಆಗಲುವಿಕೆ ಪ್ರಜೆಗಳಲ್ಲಿ ಇಂತಹ ಸ್ಥಿತಿಯನ್ನುಂಟುಮಾಡಿತು. ಅವರ ಕರುಣೆಯ ನುಡಿ ಕೇಳಿ ರಾಜ ಸ್ವಲ್ಪ ನಿಂತ. ವಿಶ್ವಾಮಿತ್ರರು ಛೇಡಿಸಿದರು. ದಾನ ಕೊಟ್ಟು ಮತ್ತೆ ಹಲುಬುತ್ತಾನೆ. ಧಿಕ್ಕಾರವಿರಲಿ ನಿನ್ನ ದಾನಕ್ಕೆ. ಅವರ ಮಾತು ಕೇಳಿ ನಡುಗಿದ ಹರಿಶ್ಚಂದ್ರ ಹೆಂಡತಿ ಮಕ್ಕಳನ್ನು ಎಳೆದುಕೊಂಡು ಹೊರಟೇ ಬಿಟ್ಟ. ಈ ಕರುಣ ದೃಶ್ಯವನ್ನು ಕಂಡ ಐದು ಜನ ವಿಶ್ವೇದೇವತೆಗಳು ಈ ರೀತಿಯಾಗಿ ನುಡಿದರು. 'ಧರ್ಮಾತ್ಮನಾದ ರಾಜನನ್ನು ಕಷ್ಟಕ್ಕೀಡುಮಾಡಿದ ಈ ವಿಶ್ವಾಮಿತ್ರ ಯಾವ ಗತಿಯನ್ನು ಹೊಂದುವನೋ? ಯಜ್ಞಗಳಲ್ಲಿ ಸೋಮಾಹುತಿಯಿಂದ ದೇವತೆಗಳನ್ನು ತೃಪ್ತಿಗೊಳಿಸಿದ ಪುಣ್ಯಾತ್ಮನಿವನು.'

ಈ ಮಾತು ಕೇಳಿದ ವಿಶ್ವಾಮಿತ್ರರು ವಿಶ್ವೇದೇವತೆಗಳನ್ನು ಶಪಿಸಿದರು. ಭೂಮಿಯಲ್ಲಿ ಮನುಷ್ಯರಾಗಿ ಹುಟ್ಟಿ ಎಂದು. ಮತ್ತೆ ಕ್ಷಮೆಯಾಚಿಸಿದಾಗ 'ಮನುಜರಾಗಿ ಹುಟ್ಟಿದಾಗ ಕಾಮಕ್ರೋಧಾದಿಗಳಿಗೆ ಬಲಿಯಾಗದೇ ಎಳವೆಯಲ್ಲಿಯೇ ಮಾನುಷ ಶರೀರವನ್ನು ಕಳೆದು ಮತ್ತೆ ಸುರಲೋಕ ಸೇರುವಿರೆಂದು ಸಮಾಧಾನ ಮಾಡಿದರು.

ಹೀಗೆ ವಿಶ್ವಾಮಿತ್ರರಿಂದ ಶಪ್ತರಾದ ಆ ವಿಶ್ವೇದೇವತೆಗಳೇ ದ್ರೌಪದಿಯ ಗರ್ಭದಲ್ಲಿ ಪಾಂಡವರಿಗೆ ಹುಟ್ಟಿ ಮದುವೆಯ ಮುನ್ನವೇ ಸಾವನ್ನಪ್ಪಿದರು ಎಂದು ನಾಲ್ಕನೆಯ ಪ್ರಶ್ನೆಗೆ ಉತ್ತರ ನೀಡಿದವು.

(ಪಂಚ ಗಂದರ್ವರಲ್ಲಿ ವಿಶ್ವೇ ದೇವತೆಗಳ ಸನ್ನಿಧಾನವನ್ನು ಆಚಾರ್ಯರೂ ತಾತ್ಪರ್ಯದಲ್ಲಿ ನಿರ್ಣಯಿಸಿದ್ದಾರೆ.) **(ಸಶೇಷ)**

## ಡಿಸೆಂಬರ್ 2008 ಪ್ರಶ್ನೋತ್ತರ–ಪದಬಂಧದ ಉತ್ತರ

**1) ಲಕ್ಷ್ಮೀದೇವಿ 2) ಚಿದಾನಂದೈತ ದೇಹ 3) ವಾಲ್ಮೀಕಿ ರಾಮಾಯಣ**
**4) ವಾಲ್ಮೀಕಿ ಮಹರ್ಷಿ 5) ತ್ರೇತಾಯುಗ 6) ಬಾಳೆ ಗಿಡ**
**7) ಚಿರತೆ 8) ಸಹರಾ 9) ಮೀನು 10) ಭೂತಾನ**

**ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ**

ಪುರಾಣ ಪರಿಚಯ

ಭಾಗ-28

# ಶ್ರೀವಿಷ್ಣುಪುರಾಣ

-ಸ್ಫೂರ್ತಿ

ಚಂದ್ರನು ಪ್ರಚೇತಸರಿಗೆ ಕಂಡು ಋಷಿಯ ಕಥೆಯನ್ನು ತಿಳಿಸಿ, ಅವರಿಂದ ಪ್ರಮ್ಲೋಚೆಯ ಮೂಲಕ ವೃಕ್ಷಗಳನ್ನು ಸೇರಿ ಅವುಗಳಿಂದ ಪೋಷಿಸಲ್ಪಟ್ಟು ತನ್ನಿಂದ ಬೆಳೆದ ಮಾರಿಷೆಯ ಪೂರ್ವಜನ್ಮವೃತ್ತಾಂತವನ್ನು ತಿಳಿಸುತ್ತಾನೆ.

ಹಿಂದೆ ಈ ಮಾರಿಷೆಯು ರಾಜನ ಪತ್ನಿಯಾಗಿ ಪತಿಯನ್ನು ಕಳೆದುಕೊಂಡು ಸಣ್ಣ ವಯಸ್ಸಿನಲ್ಲಿಯೆ ವಿಧವೆಯಾದಳು. ಮಕ್ಕಳಿಲ್ಲದೆ ಒಬ್ಬಂಟಿಗಳಾಗಿ ಶ್ರೀವಿಷ್ಣುವನ್ನು ವಿಶೇಷವಾಗಿ ಆರಾಧಿಸಿ ಒಲಿಸಿಕೊಂಡಳು. ಪ್ರತ್ಯಕ್ಷನಾದ ಭಗವಂತನು ವರ ಕೇಳೆಂದು ಹೇಳಲು ಆಕೆಯು 'ಹೇ ಭಗವನ್, ಬಾಲವೈಧವ್ಯದಿಂದಾಗಿ ನನ್ನ ಈ ಜನ್ಮ ವ್ಯರ್ಥವಾಯಿತು. ಆದ್ದರಿಂದ ಮುಂದಿನ ಜನ್ಮಗಳಲ್ಲಿ ನನಗೆ ಅತ್ಯಂತ ಪ್ರಶಂಸನೀಯರಾದ ಪತಿಯಂದಿರು ದೊರಕುವಂತಾಗಲಿ. ಪ್ರಜಾಪತಿಗಳಿಗೆ ಸಮಾನರಾದ ಪುತ್ರರನ್ನು ನಾನು ಪಡೆಯುವಂತಾಗಲಿ. ನಾನು ಮುಂದಿನ ಜನ್ಮಗಳಲ್ಲಿ ಸಕಲ ಸದ್ಗುಣಗಳಿಂದ ಭರಿತಳಾಗಿ ಅಯೋನಿಜೆಯಾಗಿ (ತಾಯಿಯ ಯೋನಿಯಲ್ಲಿ ಜನಿಸದಂತೆ) ಹುಟ್ಟುವಂತಾಗಲಿ' ಎಂದು ಪ್ರಾರ್ಥಿಸಿದಳು.

ಭಗವಂತನು ಹಾಗೆಯೇ ಆಗಲೆಂದು ಅನುಗ್ರಹಿಸಿ 'ನೀನು ಒಂದೇ ಜನ್ಮದಲ್ಲಿಯೇ ಪ್ರಖ್ಯಾತರಾದ, ಬಲಿಷ್ಠರಾದ ಹತ್ತು ಪತಿಯಂದಿರನ್ನು ಪಡೆಯುವಿ. ಬಹಳ ಬಲಿಷ್ಠನಾದ, ಪ್ರಜಾಪತಿಗಳ ಗುಣಗಳಿಂದ ಕೂಡಿದ ಮಗನನ್ನು ಪಡೆಯುವಿ. ಮುಂದೆ ಅವನ ವಂಶವೇ ಜಗತ್ತಿನಲ್ಲಿ ತುಂಬುತ್ತದೆ. ನೀನು ಅಯೋನಿಜೆಯಾಗಿ ರೂಪ, ಔದಾರ್ಯಾದಿ ಗುಣಗಳಿಂದ ಕೂಡಿದವಳಾಗಿ ಜನಿಸುವಿ ಎಂದು ಹೇಳಿ ಅಂತರ್ಧಾನನಾದನು. ಹೀಗೆ ಆ ಕನ್ಯೆಯೇ ಮಾರಿಷೆಯಾಗಿ ಹುಟ್ಟಿದ್ದಾಳೆ. ನಿಮ್ಮ ಪತ್ನಿಯಾಗಲು ಅರ್ಹಳಾಗಿದ್ದಾಳೆ' ಎಂದು ಚಂದ್ರನು ಹತ್ತು ಮಂದಿ ಪ್ರಚೇತಸರಿಗೆ ತಿಳಿಸಲು ಅವರು ಚಂದ್ರನ ಮಾತಿನಂತೆ ವೃಕ್ಷಗಳ ಮೇಲಿನ ಕೋಪವನ್ನು ತ್ಯಜಿಸಿ ವೃಕ್ಷಪುತ್ರಿಯಾದ ಮಾರಿಷೆಯನ್ನು ವಿವಾಹವಾದರು. ಈ ಹತ್ತು ಮಂದಿ ಪ್ರಚೇತಸರಿಂದ ಮಾರಿಷೆಯಲ್ಲಿ ದಕ್ಷನು ಮಗನಾಗಿ ಹುಟ್ಟಿ ಬಂದನು. ಹಿಂದೆ ಬ್ರಹ್ಮನ ಅಂಗುಷ್ಠದಿಂದ ಜನಿಸಿದ್ದ ದಕ್ಷನು ಮತ್ತೆ ಪ್ರಚೇತಸರ ಮಗನಾಗಿ ಜನಿಸಿ ಬಂದನು.

ರಾಮಾಯಣ-ಮಹಾಭಾರತ-ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ

ದಕ್ಷ ಪ್ರಜಾಪತಿಯು ಚತುರ್ಮುಖನಿಂದ ಪ್ರಜಾವೃದ್ಧಿಗಾಗಿ ಆದೇಶಿಸಲ್ಪಟ್ಟವನಾಗಿ ಮೊದಲು ಮನಸ್ಸಿನಿಂದಲೆ ದೇವ–ಋಷಿ–ಗಂಧರ್ವ–ಅಸುರ–ನಾಗ ಮುಂತಾದವರನ್ನು ಸೃಜಿಸಿದನು. ಆದರೆ ಇವನು ಸೃಷ್ಟಿಸಿದಷ್ಟೇ ಪ್ರಜೆಗಳು ಹೊರತು ಪ್ರಜಾವೃದ್ಧಿಯಾಗದಿರುವುದನ್ನು ಕಂಡು ಬಳಿಕ ಮೈಥುನಭಾವದಿಂದ ಸೃಷ್ಟಿಸಲು ಇಚ್ಛಿಸಿದವನಾಗಿ ವೀರಣ (ಪಂಚಜನ) ಪ್ರಜಾಪತಿಯ ಮಗಳಾದ  ಬಹಳ ತಪಸ್ಸುಳ್ಳ ಅಸಿಕ್ನಿಯನ್ನು ವಿವಾಹವಾದನು. ಅಂದಿನಿಂದ ಪತಿ–ಪತ್ನಿಯರು ಕೂಡುವ ಮೂಲಕ ಪ್ರಜೋತ್ಪತ್ತಿಯಾಗಲು ಪ್ರಾರಂಭವಾಯಿತು. ಅದಕ್ಕಿಂತ ಮೊದಲು ಮಹಾತಪಸ್ವಿಗಳು ತಮ್ಮ ಸಂಕಲ್ಪ, ಸ್ಪರ್ಶ, ದರ್ಶನದಿಂದಲೆ ಮಕ್ಕಳನ್ನು ಹುಟ್ಟಿಸುತ್ತಿದ್ದರು.

ದಕ್ಷನು ಅಸಿಕ್ನಿಯಲ್ಲಿ ಮೊದಲು ಹರ್ಯಶ್ವರೆಂಬ ಐದುಸಾವಿರ ಮಕ್ಕಳನ್ನು ಪ್ರಜಾವೃದ್ಧಿಗಾಗಿ ಪಡೆದನು. ತಂದೆಯ ಆದೇಶದಂತೆ ಪ್ರಜಾವೃದ್ಧಿಯಲ್ಲಿ ಉದ್ಯುಕ್ತರಾದ ಹರ್ಯಶ್ವರನ್ನು ಕಂಡ ನಾರದರು 'ನೀವೆಲ್ಲರೂ ಮೂರ್ಖರು. ನಿಮಗೆ ಭೂಮಿ ಹೇಗಿದೆ ಎಂದೇ ಗೊತ್ತಿಲ್ಲ. ಹಾಗಿದ್ದರೂ ಭೂಮಿಯನ್ನು ನಿಮ್ಮ ಮಕ್ಕಳಿಂದ ತುಂಬಲು ಹೊರಟಿರುವಿರಿ. ಭೂಮಿಯ  ಮೇಲೆ, ಕೆಳಗೆ, ಮಧ್ಯಭಾಗವನ್ನು ತಿಳಿದಿರುವಿರೋ? ಇಲ್ಲವಷ್ಟೆ. ಆದ್ದರಿಂದ ಮೊದಲು ಭೂಮಿಯ ಬಗ್ಗೆ ಚೆನ್ನಾಗಿ ತಿಳಿದು ಬಳಿಕ ಸೃಷ್ಟಿಕಾರ್ಯದಲ್ಲಿ ತೊಡಗಿರಿ' ಎಂದು ಆದೇಶಿಸಿದರು. ನಾರದರ ಮಾತಿನಂತೆ ಭೂಮಿಯನ್ನು ತಿಳಿಯಲು ಎಲ್ಲ ದಿಕ್ಕುಗಳತ್ತ ಹೊರಟ ಹರ್ಯಶ್ವರು ಮರಳಿ ಬರಲೇ ಇಲ್ಲ. ಇತ್ತ ದಕ್ಷಪ್ರಜಾಪತಿಯು ಅಸಿಕ್ನಿಯಲ್ಲಿ ಮತ್ತೆ ಶಬಲಾಶ್ವರೆಂಬ ಸಾವಿರ ಮಕ್ಕಳನ್ನು ಹುಟ್ಟಿಸಿ ಅವರಿಗೆ ಪ್ರಜಾವೃದ್ಧಿ ಮಾಡುವಂತೆ ಆದೇಶಿಸಿದನು. ಶಬಲಾಶ್ವರೂ ಪ್ರಜಾವೃದ್ಧಿಗಾಗಿ ಉದ್ಯುಕ್ತರಾಗಲು ನಾರದರು ಹಿಂದಿನಂತೆಯೆ ಶಬಲಾಶ್ವರಿಗೂ ಉಪದೇಶಿಸಿ ಅಣ್ಣಂದಿರಾದ ಹರ್ಯಶ್ವರ ದಾರಿಯಲ್ಲಿಯೇ ಸಾಗಲು ತಿಳಿಸಿದರು. ಶಬಲಾಶ್ವರು ಅಣ್ಣಂದಿರ ಹಾದಿಯನ್ನು ಹುಡುಕಲು ಹೊರಟವರು ಮರಳಿ ಬರಲೇ ಇಲ್ಲ.

**ತತಃ ಪ್ರಭೃತಿ ವೈ ಭ್ರಾತಾ ಭ್ರಾತುರನ್ವೇಷಣೇ ದ್ವಿಜ ।**
**ಪ್ರಯಾತೋ ನಶ್ಯತಿ ತಥಾ ತನ್ನ ಕಾರ್ಯಂ ವಿಜಾನತಾ ॥**

(ವಿ.ಪು. 15–15–100)

ಅಂದಿನಿಂದ ಸಹೋದರನನ್ನು ಹುಡುಕಲು ಹೊರಟ ಸಹೋದರನೂ ನಷ್ಟವಾಗುತ್ತಾನೆ. ಆದ್ದರಿಂದ ತಿಳಿದವನು ಎಂದಿಗೂ ಹೀಗೆ ಮಾಡಬಾರದು. **(ಸಶೇಷ)**

**ಇಂದ್ರಿಯಗಳೆಂಬ ಕುದುರೆಗಳನ್ನು  ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ**

# ವೇದವನ್ನೊಪ್ಪದ ಮತಾಚಾರ್ಯರ ಮಾತು ಮೂಲೆ ಪಾಲಾಯಿತು

–ಅನಂತಕೃಷ್ಣಾಚಾರ್ಯ

ಆಚಾರ್ಯರು ತಮ್ಮ ಪ್ರವಚನಭಾರತಿಯನ್ನು ಮುಂದುವರಿಸುತ್ತ– ಧರ್ಮಾಧರ್ಮಗಳನ್ನು ಅರಿಯಲು ವೇದಗಳನ್ನು ಪರಮಪ್ರಮಾಣವೆಂದು ಒಪ್ಪಲೇಬೇಕೆಂದು ಹೇಳಿದಾಗ ಕೆಲವರು ಹೀಗೆ ಆಕ್ಷೇಪಿಸಬಹುದು. 'ಧರ್ಮ ಹಾಗೂ ಅಧರ್ಮಗಳ ಬಗ್ಗೆ ಅರಿಯಲು ವೇದಗಳ ಅವಶ್ಯಕತೆ ಇಲ್ಲ. ಆಯಾ ಮತಗಳ ಧರ್ಮಗುರುಗಳ ಮಾತಿನಿಂದಲೆ ಧರ್ಮಾಧರ್ಮಗಳ ನಿಶ್ಚಯ ಉಂಟಾಗುತ್ತದೆ' ಎಂದು.

ಇದು ಸರಿಯಲ್ಲ. ಏಕೆಂದರೆ ಇಲ್ಲೊಂದು ಸಂಶಯ ಮೂಡಲು ಅವಕಾಶವಿದೆ. ಕೇವಲ ಧರ್ಮಗುರುಗಳ ಮಾತಿನಿಂದಲೆ ಧರ್ಮಾಧರ್ಮಗಳ ನಿಶ್ಚಯ ಹೇಗೆ ಉಂಟಾಗುತ್ತದೆ? ನಮ್ಮ ಮಾತಿನಿಂದ ಧರ್ಮಾಧರ್ಮಗಳ ನಿಶ್ಚಯ ಏಕೆ ಉಂಟಾಗಲಾರದು?

'ನಮ್ಮ ಗುರುಗಳು ಎಲ್ಲವನ್ನು ಬಲ್ಲ ಸರ್ವಜ್ಞರು, ತಪಸ್ವಿಗಳು. ಆದ್ದರಿಂದ ಅವರ ಮಾತು ಯಾವತ್ತೂ ಸತ್ಯವಾಗಿರುತ್ತದೆ. ಆದ್ದರಿಂದ ಅದೇ ಪರಮಪ್ರಮಾಣ' ಎಂದು ಆಯಾ ಮತಾಚಾರ್ಯರ ಶಿಷ್ಯರು ಹೇಳಿಕೊಳ್ಳಬಹುದು.

ಆದರೂ ಸಮಸ್ಯೆ ಬಗೆಹರಿಯಲಿಲ್ಲ. ಮತ್ತೆಷ್ಟು ಕಗ್ಗಂಟಾಯಿತು. ' ನಿಮ್ಮ ಗುರುಗಳು ಸರ್ವಜ್ಞರು, ಸತ್ಯವಂತರು, ತಪಸ್ವಿಗಳು ಎಂಬುದಾದರು ಹೇಗೆ ಸಿದ್ಧವಾಯಿತು?' ಎಂದು ಆಯಾ ಮತಾಚಾರ್ಯರ ಶಿಷ್ಯರ ಬಳಿ ಕೇಳಿದಾಗ ಅವರು 'ನಮ್ಮ ಗುರುಗಳನ್ನು ಕಂಡಾಗಲೆ ಅವರು ತಪಸ್ವಿಗಳೆಂದು ಎಲ್ಲರಿಗೂ ಅರ್ಥವಾಗುತ್ತದೆ. ಅವರ ಉಪದೇಶವನ್ನು ಕೇಳಿದಾಗಲಂತೂ ಎಂತಹ ಪಾಮರನಿಗೂ ಅವರು ಮಹಾಜ್ಞಾನಿಗಳೆಂದು ಮನದಟ್ಟಾಗುತ್ತದೆ. ಇಷ್ಟಲ್ಲದೆ ಅವರು ತೋರುವ ಪವಾಡಗಳೂ ಅವರು ಜ್ಞಾನಿಗಳೆಂಬುದಕ್ಕೆ ಪ್ರತ್ಯಕ್ಷ ನಿದರ್ಶನ. ಇಷ್ಟೆಲ್ಲ ಇರುವವರು ಸತ್ಯವಂತರೆಂದು ಮತ್ತೆ ಹೇಳಬೇಕೇನು' ಎಂದು ಉತ್ತರಿಸಬಹುದು. ಆದರೆ ಇಂತಹ ಮಾತುಗಳಿಂದ ಏನೂ ಸಿದ್ಧವಾಗದು. ಯಾರನ್ನೂ ಕೇವಲ ನೋಡಿದ ಕೂಡಲೆ ತಪಸ್ವಿಗಳೆಂದು ನಿರ್ಧರಿಸಲಾಗದು ಏಕೆಂದರೆ ಅನೇಕ ಕಡೆಗಳಲ್ಲಿ ವಂಚಕರೂ ತಪಸ್ವಿಗಳ ವೇಷದಲ್ಲಿ ಕುಳಿತಿರುವುದನ್ನು ಗಮನಿಸಬಹುದು. ಕೆಲವರು ಮಾತಿನ ಚಾಲಾಕಿತನದಿಂದಲೆ ಲೋಕವನ್ನು ಮರಳುಗೊಳಿಸಿ ವಂಚಿಸಬಹುದು. ಆದ್ದರಿಂದ ಕೇವಲ

ಸತ್ಯ, ಪ್ರಿಯ ಮತ್ತು ಹಿತನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ

ಮಾತುಗಾರಿಕೆಯೇ ಜ್ಞಾನಿಗಳೆಂಬುದಕ್ಕೆ ಮಾನದಂಡವಲ್ಲ. ಇಂದ್ರಜಾಲವಿದ್ಯೆಯನ್ನು ಬಲ್ಲ ಮಾಯಾವಿಯೂ ಅನೇಕ ಪವಾಡಗಳನ್ನು ತೋರಿ ಜನರನ್ನು ಮರಳುಗೊಳಿಸಬಹುದು. ಆದ್ದರಿಂದ ಕೇವಲ ಪವಾಡಗಳನ್ನು ತೋರುವುದರಿಂದಲೆ ಜ್ಞಾನಿಯೆಂದು ಹೇಳಲಾಗದು. ಇನ್ನು ಸತ್ಯವಂತರೋ, ಅಸತ್ಯವಂತರೋ ಎಂಬುದಂತೂ ಮೇಲ್ನೋಟಕ್ಕೆ ತಿಳಿಯುವ ವಿಷಯವೇ ಅಲ್ಲ.

ಆಯಾ ಮತಾಚಾರ್ಯರ ಶಿಷ್ಯರು 'ನಮ್ಮ ಗುರುಗಳು ಜ್ಞಾನಿಗಳು; ಸತ್ಯವಂತರು ಹೀಗೆ ನಮಗೆ ಮನದಟ್ಟಾಗಿದೆ' ಎಂದು ಉತ್ತರಿಸಿದರೆ ಅದಕ್ಕೆ ಪ್ರತಿಯಾಗಿ 'ನಿಮ್ಮ ಗುರುಗಳು ಅಜ್ಞಾನಿಗಳು, ವಂಚಕರು ಎಂದು ನಮಗೆ ಮನದಟ್ಟಾಗಿದೆ ಎಂದು ನಾವು ಉತ್ತರಿಸಬಹುದಲ್ಲವೆ? ಇಷ್ಟೇ ಅಲ್ಲದೆ ಒಬ್ಬ ಮತಾಚಾರ್ಯನ ಶಿಷ್ಯ ತನ್ನ ಗುರುಗಳನ್ನು ಸರ್ವಜ್ಞ, ಸತ್ಯವಂತರೆಂದು ಹೇಳಿದರೆ ಅದಕ್ಕೆ ವಿರುದ್ಧವಾಗಿ ಪ್ರತಿಪಾದಿಸುವ ಮತ್ತೊಂದು ಮತದ ಗುರುವಿನ ಶಿಷ್ಯ ತನ್ನ ಗುರುಗಳನ್ನು ಸರ್ವಜ್ಞ,ಸತ್ಯವಂತರೆಂದೇ ಪ್ರತಿಪಾದಿಸುತ್ತಾನೆ. ಹೀಗೆ ಎಲ್ಲ ಮತಾಚಾರ್ಯರ ಶಿಷ್ಯರು ತಮ್ಮ ಗುರುಗಳನ್ನು ಸರ್ವಜ್ಞ,ಸತ್ಯವಂತರೆಂದೇ ಹೇಳುತ್ತಾರೆ. ವಸ್ತುತಃ ಇವರೆಲ್ಲರೂ ಪರಸ್ಪರ ವಿರುದ್ಧವಾಗಿ ಪ್ರತಿಪಾದಿಸುವವರು. ಹೀಗೆ ಪರಸ್ಪರ ವಿರುದ್ಧವಾದ ಮಾತುಗಳೆಲ್ಲವೂ ಸತ್ಯವಾಗುವುದೆಂತು? ಎಲ್ಲ ಮತಾಚಾರ್ಯರು ಸತ್ಯವಂತರು; ಜ್ಞಾನಿಗಳಾಗುವುದೆಂತು? ಎಲ್ಲ ಮತಾಚಾರ್ಯರ ಶಿಷ್ಯರೂ ತಮ್ಮ ಗುರುಗಳು ಸರ್ವಜ್ಞರಾದ್ದರಿಂದ ಅವರ ಉಪದೇಶ ಮಾತ್ರ ಸತ್ಯ. ಉಳಿದ ಮತಾಚಾರ್ಯರ ಉಪದೇಶ ತಪ್ಪು ಎಂದು ಹೇಳಲೇಬೇಕಾಗುತ್ತದೆ. ಹೀಗೆ ಕಡೆಗೆ ಎಲ್ಲ ಮತಾಚಾರ್ಯರ ಉಪದೇಶವೂ ತಪ್ಪೆಂದೇ ಹೇಳಿದಂತಾಯಿತು.

ಹೀಗೆ ಧರ್ಮಾಧರ್ಮಗಳ ವಿಷಯದಲ್ಲಿ ವೇದಗಳನ್ನು ಪರಮಪ್ರಮಾಣವೆಂದು ಒಪ್ಪದೇ ಕೇವಲ ಪುರುಷರಾದ ಧರ್ಮಗುರುಗಳ ಮಾತೇ ಸಾಕು ಎನ್ನುವವರು ನಿರುತ್ತರರಾಗಬೇಕಾಗುತ್ತದೆ.

ಇಲ್ಲಿ ಕಡೆಗೊಂದು ಸಂಶಯ ಉಳಿಯಬಹುದು. ಮನುಷ್ಯರ ವಿಷಯದಲ್ಲಾದರೋ ಮೇಲೆ ತಿಳಿಸಿದಂತೆ ಸರ್ವಜ್ಞರು ಹೌದೋ, ಅಲ್ಲವೋ ಎಂದು ಸಂಶಯ ಮೂಡಬಹುದು. ಆದರೆ ಭಗವಂತನ ವಿಷಯದಲ್ಲಿ ಯಾರಿಗೂ ಸಂಶಯವಿಲ್ಲವಷ್ಟೆ. ಅವನ ಉಪದೇಶಗಳೇ ಧರ್ಮಾಧರ್ಮಗಳ ವಿಷಯದಲ್ಲಿ ಪ್ರಮಾಣವೆನ್ನೋಣ. ಕೇವಲ ವೇದಗಳಿಂದಲೇ ಧರ್ಮಾಧರ್ಮಗಳು ತಿಳಿಯಲ್ಪಡುತ್ತವೆಂಬ ಆಗ್ರಹ ಬೇಡ ಎಂದು.

**(ಸಶೇಷ)**

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ

ಭಾಗ-8

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಅಲಂಕಾರಾದಿ ಸಮಸ್ತ ಕಾವ್ಯಲಕ್ಷಣಗಳಿಂದ ಯುಕ್ತವಾಗಿ, ಸರಸ-ಸುಂದರ ಸಂಸ್ಕೃತ ಶಬ್ದಗಳಿಂದ ರಚಿಸಲ್ಪಟ್ಟ ಕಾವ್ಯವಾಗಲಿ-ಗ್ರಂಥವಾಗಲಿ ಕದಾಚಿತ್ ಹರಿಕಥಾನುವಾದದಿಂದ ವಿರಹಿತವಾದಲ್ಲಿ ಜ್ಞಾನಿಗಳಿಗೆ ಸಮ್ಮತವಾಗುವುದಿಲ್ಲ. ಅದು ವಾಯಸತೀರ್ಥಕ್ಕೆ ಸಮವಾಗುವುದು. ಕಾಗೆಗಳು ಮುಳುಗಲು ಯೋಗ್ಯವಾದ ನೀರಿನಲ್ಲಿ ಹಂಸಗಳು ಸೇರದಂತೆ ಹರಿಮಾಹಾತ್ಮ್ಯವಿರಹಿತಗಳಾದ ಗ್ರಂಥಗಳನ್ನು, ಸರ್ವಸಂಗಪರಿತ್ಯಾಗಿಗಳಾಗಿ ಬ್ರಹ್ಮೈಕರತರಾದ ಜ್ಞಾನಿಗಳು ಓದಲೂ, ಕೇಳಲೂ ಎಂದೂ ಇಚ್ಛೈಸುವುದಿಲ್ಲ.

**ನ ಯದ್ವಚಶ್ಚಿತ್ರಪದಂ ಹರೇರ್ಯಶೋ**
**ಜಗತ್ಪವಿತ್ರಂ ಯದಿ ಕರ್ಹಿಚಿದ್ವದೇತ್**
**ತದ್ಧ್ವಾಂಕ್ಷ ತೀರ್ಥಂ ನತು ಹಂಸಸೇವಿತಂ**
**ಯತ್ರಾಚ್ಯುತಸ್ತತ್ರ ಹಿ ಸಾಧವೋऽಮರಾಃ**

**ನ ತದ್ವಚಃ ಚಿತ್ರಪದಂ ಹರೇರ್ಯಶೋ**
**ಜಗತ್ಪವಿತ್ರಂ ನಗೃಣೀತ ಕರ್ಹಿಚಿತ್**
**ತದ್ವಾಯಸಂ ತೀರ್ಥಮುಶಂತಿ ಮಾನಸಾಃ**
**ನ ಯತ್ರ ಹಂಸಾ ನ್ಯಪತನ್ನಿಮಂಕ್ಷಯಾ**

ಪ್ರಾಕೃತ ಭಾಷೆಯಲ್ಲಿ ರಚಿತವಾಗಿದ್ದರೂ, ಛಂದೋವ್ಯಾಕರಣಾದಿ ದೋಷಗಳಿಂದ ಕೂಡಿದ್ದರೂ, ಹರಿಕಥಾಮೃತದಿಂದ ಯುಕ್ತವಾಗಿದ್ದಲ್ಲಿ ಆ ಗ್ರಂಥವನ್ನು ಶಿರಸಾಧರಿಸಿ, ಮನಸಾರ ಆಸ್ವಾದಿಸಿ ಆನಂದಪಡುವರು. ಟೀಕಾಕೃತ್ಪಾದರು ತಮ್ಮ ತತ್ತ್ವಪ್ರಕಾಶಿಕೆಯ ಪ್ರಾರಂಭದಲ್ಲಿ

**'ಗಂಗಾಸಂಗೇನ ನೈರ್ಮಲ್ಯಂ ರಥ್ಯಾದ್ಭಿರ್ಲಭ್ಯತೇ ಯಥಾ**
**ವಾಚೋ ವಿಶುದ್ಧಿಸಿದ್ಧ್ಯರ್ಥಂ ಸಂಗಮ್ಯಂತೇ ಗುರೋರ್ಗಿರಃ'**

ಎಂದು ಹೇಳಿ ಭಾಗವತ ವಾಕ್ಯವನ್ನೇ ಸಮರ್ಥಿಸಿರುವರು. ಮಹಿತಾತ್ಮರ ವಾಕ್ಯಗಳು ಅನೇಕಾರ್ಥ ಗರ್ಭಿತಗಳು. ಮಾತುಗಳಿಗೆ ಶುದ್ಧಿ ಹಾಗು ಸೌಂದರ್ಯಗಳು ಭಗವತ್ಸಂಬಂಧದಿಂದ ಮಾತ್ರ. ಈ ಶ್ಲೋಕದಲ್ಲಿ ಟೀಕಾಕೃತ್ಪಾದರು ತಮ್ಮ ವಾಕ್ಪ್ರವಾಹವನ್ನು ಬೀದಿಯ ನೀರಿಗೆ ಹೋಲಿಸಿದ್ದಾರೆ. ಶ್ರೀಮದಾನಂದತೀರ್ಥ ಭಗವತ್ಪಾದರ ಮಾತುಗಳೆಲ್ಲ

ದೀನ-ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ



*

ಮಂತ್ರಗಳು. ಮಹಾಮಂತ್ರ ದೇವನಾದ ನಾರಾಯಣನಿಗೆ ವಾಚಕಗಳು. ಇಂಥಾ ವಾಗ್ಗಂಗೆಯೊಡನೆ ಸಂಗಮವೇ ತಮ್ಮ ಮಾತುಗಳಿಗೆ ಸಾರ್ವಜನೀನತ್ವವನ್ನೂ, ಪಾವಿತ್ರ್ಯವನ್ನೂ ತಂದು ಕೊಟ್ಟಿತೆಂದು ಹೇಳುತ್ತಾರೆ. ಆಚಾರ್ಯರ ಅಮೃತಮಯ ವಾಕ್ಯಗಳೊಡನೆ ಸಂಪರ್ಕ ಬೆಳೆಸಿಕೊಂಡ ವಾಕ್ಯಗಳೆಲ್ಲವೂ ಪರಮಪವಿತ್ರಗಳು. ಅವುಗಳಿಂದ ದೂರಸರಿದ ವಾಕ್ಯಗಳೆಲ್ಲವೂ ನಿಷ್ಪ್ರಯೋಜಕಗಳು. ಅವೇ ವಾಯಸತೀರ್ಥಗಳು. ಪರಮಾತ್ಮನ ಕಥಾಪ್ರತಿಪಾದಕವಾದ ಗ್ರಂಥವು ಯಾವ ಭಾಷೆಯಲ್ಲೇ ಇರಲಿ ಸಕಲ ಸಾತ್ವಿಕರಿಗೆ ಸಮ್ಮತವಾಗಿ ಕೈವಲ್ಯಪ್ರದನಾದ ಶ್ರೀಹರಿಯ ಪರಮಾನುಗ್ರಹವನ್ನು ಸಂಪಾದಿಸಿ ಕೊಡುವುದೆಂಬಲ್ಲಿ ಯಾವ ಸಂದೇಹವೂ ಇಲ್ಲ. ಪರಮಾತ್ಮನ ಪ್ರಾಪ್ತಿಗೆ ಬೇಕಾದ ಸಕಲಸಾಧನೋಪಾಯಗಳನ್ನು ಸುರಿಮಳೆಯಾಗಿ ಸುರಿಸುವ ಜಗನ್ನಾಥದಾಸರ ಹರಿಕಥಾಮೃತಸಾರಗ್ರಂಥದ ಬಗ್ಗೆ ಹೇಳುವುದೇನಿದೆ.

ಆಚಾರ್ಯರ ಗ್ರಂಥಗಳನ್ನು ತಮ್ಮ ಯೋಗ್ಯತೆಗನುಗುಣವಾಗಿ ಅಧ್ಯಯನ ಮಾಡಿ, ಆನಂದಿಸಿ, ಜನ್ಮಸಾರ್ಥಕಗೊಳಿಸಿಕೊಂಡು, ಕೊನೆಗೆ ಸನ್ಯಾಸದೀಕ್ಷೆಯಿಂದ ಪೂತರಾದ ಸಂಕರ್ಷಣ ಒಡೆಯರೇ ಮೊದಲಾದ ಮಹನೀಯರಿಂದ ವ್ಯಾಖ್ಯಾನಿಸಲ್ಪಡುವುದೇ ಈ ಹರಿಕಥಾಮೃತಸಾರಗ್ರಂಥದ ಹಿರಿಮೆಯನ್ನು ಎತ್ತಿ ತೋರುವುದು. ಅನೇಕ ಉದ್ಗ್ರಂಥಗಳಿಗೆ ವ್ಯಾಖ್ಯಾನಕರ್ತೃಗಳೆಂದು ಪ್ರಥಿತರಾದ ತಾಮ್ರ ಪರ್ಣೆಆಚಾರ್ಯರು, ಜಂಬುಖಂಡಿ ವಾದಿರಾಜಾಚಾರ್ಯರು, ಗುರುಜಗನ್ನಾಥದಾಸಾಚಾರ್ಯ ಪ್ರಭೃತಿಗಳು, ಸುಧಾದಿಗ್ರಂಥಗಳ ಸಾರವೇ ಈ ಹರಿಕಥಾಮೃತಸಾರ ಎಂದು ಸಾರಿ ಹೇಳುವುದಕ್ಕಾಗಿಯೇ, ಕನ್ನಡ ಭಾಷೆಯಲ್ಲಿ ರಚಿಸಲ್ಪಟ್ಟ ಈ ಗ್ರಂಥಕ್ಕೆ ಸಂಸ್ಕೃತ ಭಾಷೆಯಲ್ಲಿ ವ್ಯಾಖ್ಯಾನಗೈದು, ತಮ್ಮ ಸಂಸ್ಕೃತ ಭಾಷೆಯನ್ನು ನಿಜವಾದ ಸುಂದರ-ಭಾಷೆಯನ್ನಾಗಿ ಮಾಡಿದರು. ಕನ್ನಡ ವಾಙ್ಮಯ ಪ್ರಪಂಚದಲ್ಲೇ ಮೂರು ಸಂಸ್ಕೃತ ವ್ಯಾಖ್ಯಾನಗಳಿಂದ ಭೂಷಿತವಾದ ಸಾಧನ ಸಂಪತ್ತುಗಳಿಂದ ಕೂಡಿದ ಉಚ್ಚಮಟ್ಟದ ಉದ್ಗ್ರಂಥ ಶ್ರೀಮದ್ಧರಿಕಥಾಮೃತಸಾರ.

**'ಯದಿ ಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್'** ಎಂಬ ಬಿರುದಿನಿಂದ ಭೂಷಿತವಾದ ಭಾರತದಂತೆ, ಹರಿಕಥಾಮೃತಸಾರದಲ್ಲಿ ಹೇಳದೇ ಇರುವ ಮೋಕ್ಷೋಪಯೋಗಿ ಪ್ರಮೇಯಗಳೇ ಇಲ್ಲವೆಂದಲ್ಲಿ ತಪ್ಪಾಗಲಾರದು. ಈ ಗ್ರಂಥದ ಶ್ರವಣ-ಮನನ-ಪಾರಾಯಣಾದಿಗಳು ಗುರ್ವಂತರ್ಗತ ಭಗವಂತನ ಪರಮಾನುಗ್ರಹವನ್ನುಂಟುಮಾಡಿ ಇಹಪರಸುಖಗಳಿಗೆ ಕಾರಣವಾಗುವುವು. **(ಸಶೇಷ)**

ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ

# ಮುದ್ರೆಗಳಲ್ಲಿ ಪುರುಷಾರ್ಥಗಳ ಚಿಂತನೆ

–ವಿ॥ ಡಿ. ಗುರುಪ್ರಸಾದ್ ಭಟ್

ನಿತ್ಯಕರ್ಮಾನುಷ್ಠಾನಗಳಲ್ಲಿ ಬಹಳ ಮುಖ್ಯವಾದ ಅಂಗ ಗೋಪೀಧಾರಣೆ ಮತ್ತು ಮುದ್ರಾಧಾರಣೆ. ಇವುಗಳಲ್ಲಿ ಗೋಪೀಧಾರಣೆಯು ಯಾವುದೇ ಕರ್ಮಾನುಷ್ಠಾನದ ಪೂರ್ವದಲ್ಲಿ ವೈದಿಕ ಸಂಕೇತವಾಗಿಯೂ ಮತ್ತು ಮುದ್ರಾಧಾರಣೆಯು ವಿಶೇಷವಾಗಿ ವೈಷ್ಣವರಿಗೆ ವೈಷ್ಣವದೀಕ್ಷೆಯ ಸಂಕೇತವಾಗಿಯೂ ಬಲ್ಲವರಿಂದ ನಿರ್ಣಯಿಸಲ್ಪಟ್ಟಿದೆ.

ವೈಷ್ಣವರು ವಿಶೇಷವಾಗಿ ಗೋಪೀಧಾರಣಾ ನಂತರ ಪಂಚಮುದ್ರೆಗಳನ್ನು ಧರಿಸುವುದು ಕರ್ತವ್ಯದ ಜೊತೆಗೆ ಸಂಪ್ರದಾಯವೂ ಆಗಿದೆ ತಾನೇ? ಆ ಪಂಚಮುದ್ರೆಗಳು ಕ್ರಮವಾಗಿ ಚಕ್ರ, ಶಂಖ, ಗದಾ, ಪದ್ಮ ಮತ್ತು ನಾರಾಯಣವೆಂಬುದಾಗಿ ಅಂಕಿತ ಉಳ್ಳವುಗಳಾಗಿವೆ. ಅವುಗಳಲ್ಲಿ ಚಕ್ರಾದಿ ನಾಲ್ಕು ಮುದ್ರೆಗಳು ಕ್ರಮವಾಗಿ ಧರ್ಮಾದಿ ನಾಲ್ಕು ಪುರುಷಾರ್ಥಗಳ ಸಂಕೇತಗಳಾಗಿವೆ. ಚಕ್ರ=ಧರ್ಮ, ಶಂಖ=ಅರ್ಥ, ಗದಾ=ಕಾಮ, ಪದ್ಮ=ಮೋಕ್ಷ

ಮೊದಲನೆಯದ್ದು ಚಕ್ರಮುದ್ರೆ. ಚಕ್ರ ಮುದ್ರೆ ಧಾರಣೆಯೇ ಒಂದು ಧರ್ಮ. ಯಾಕೆಂದರೆ ಚಕ್ರ ಕೃಷ್ಣನ ಆಯುಧ ತಾನೆ? **'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ'** ಎಂಬಂತೆ ಕೃಷ್ಣ, ಧರ್ಮದ ಸ್ಥಾಪನೆಗಾಗಿಯೇ ಅವತರಿಸಿದವನು ತಾನೇ? ಧರ್ಮಸ್ಥಾಪನೆಗಾಗಿ ಚಕ್ರದಂತೆ ಪ್ರತಿಯುಗದಲ್ಲಿಯೂ ಅವತರಿಸುತ್ತಾನೆ. ಆದ್ದರಿಂದ ಚಕ್ರಮುದ್ರೆ ಧರಿಸುವಾಗ ಪುರುಷಾರ್ಥಗಳಲ್ಲಿ ಮೊದಲನೆಯದ್ದಾದ ಧರ್ಮದ ಚಿಂತನೆ ಯೋಗ್ಯವಾಗಿದೆ ತಾನೇ?

ಎರಡನೆಯದ್ದು ಶಂಖ ಮುದ್ರೆ. ಇದನ್ನು ಧರಿಸುವಾಗ ಪುರುಷಾರ್ಥಗಳಲ್ಲಿ ಎರಡನೆಯದ್ದಾದ ಅರ್ಥದ ಚಿಂತನೆ ಯೋಗ್ಯವಾಗಿದೆ. ಅರ್ಥ=ಸಂಪತ್ತು. ಸಂಪತ್ತಿಗೆ ಅಭಿಮಾನಿನಿ ಲಕ್ಷ್ಮೀ. ನಮ್ಮಲ್ಲಿ ಇಂದಿಗೂ ಬಲಮುರಿ ಶಂಖ ಸಂಪತ್ತಿನ ಸಂಕೇತವಾಗಿ ಪೀಠದಲ್ಲಿ ಸ್ಥಾಪಿಸಲ್ಪಡುತ್ತದೆ. ಧರ್ಮಾಚರಣೆಗೂ ಅರ್ಥದ ಅವಶ್ಯಕತೆ ಇದೆ. ಧರ್ಮದಿಂದ ಅರ್ಥದ ಸಂಪಾದನೆ, ಆ ಅರ್ಥದಿಂದ ಧರ್ಮಾಚರಣೆ. ಹೀಗೆ ಒಂದಕ್ಕೊಂದು ಪೂರಕವಾಗಿರುವ ಈ ಎರಡೂ ಮೋಕ್ಷವೆಂಬ ಕೊನೆಯ ಪುರುಷಾರ್ಥ ಸಾಧನೆಗೆ ಮೂಲಭೂತವಾದ ತಳಹದಿಯಾಗಿವೆ.

**ಬಂದ ಹಣದಲ್ಲಿ ಸ್ವಲ್ಪಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ**

ಶಂಖ ಕೃಷ್ಣನಿಗೆ ಪ್ರಿಯವಾದ ಆಯುಧವೂ ಹೌದು. ಅದಕ್ಕೆ ಅಭಿಮಾನಿನಿಯಾದ ಲಕ್ಷ್ಮೀ ಕೃಷ್ಣನ ಪತ್ನಿಯೂ ಹೌದು. ಅದಕ್ಕೆಂದೇ ಬಲಗೈಯಲ್ಲಿ (ಬಲಭಾಗದಲ್ಲಿ) ಶಂಖ (ಲಕ್ಷ್ಮೀ) ದ ಚಿಂತನೆ. **ಪಾಂಚಜನ್ಯಂ ಹೃಷೀಕೇಶಃ** ಎಂಬಂತೆ ಪಾಂಚಜನ್ಯವೆಂಬ ಹೆಸರಿನ ಶಂಖವನ್ನು ಯುದ್ಧಾರಂಭದಲ್ಲಿ ಮೊಳಗಿಸಿದ್ದು ಅವನೇ ಅಲ್ಲವೇ? ಧರ್ಮಸ್ಥಾಪನೆಗಾಗಿ ಶಂಖದ ನಾದ. ಇದು ಯುದ್ಧ ಘೋಷಣೆಯ ಸಂಕೇತವೂ ಹೌದು. **ಸ ಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್** ಎಂಬಂತೆ ದುಷ್ಟರಿಗೆ ದುಃಖಕಾರಿಯಾದ ಸಜ್ಜನರಿಗೆ ಆನಂದಕಾರಿಯಾದ ನಾದ ಶಂಖದ್ದು ಆಗಿದೆ. ಶಂಖದಲ್ಲಿ ಬರುವ ನಾದವೂ ವೈದಿಕ ವಾಙ್ಮಯದ ಬೀಜಾಕ್ಷರವಾಗಿರುವ ಓಂಕಾರದ ಸಂಕೇತ. ಆದ್ದರಿಂದ ಶಂಖವು ಅರ್ಥದ ಸಂಕೇತವಾದ್ದರಿಂದ ಅರ್ಥಶಬ್ದಕ್ಕೆ ಪ್ರಯೋಜನವೆಂಬ ಅರ್ಥವೂ ಇರುವುದರಿಂದ (ಅರ್ಥೋಽಭಿಧೇಯ ರೈವಸ್ತುಪ್ರಯೋಜನನಿವೃತ್ತಿಷು) ಈ ಅರ್ಥದ ಅನುಸಂಧಾನದೊಂದಿಗೆ ಶಂಖವೆಂಬ ಮುದ್ರೆ ಧರಿಸಲ್ಪಡಬೇಕು.

ಮೂರನೆಯದ್ದು ಗದಾಮುದ್ರೆ. ಇದು ಪುರುಷಾರ್ಥಗಳಲ್ಲಿ ಮೂರನೆಯದ್ದಾದ ಕಾಮದ ಸಂಕೇತ. ಸತ್ಕಾಮನೆ, ದುಷ್ಕಾಮನೆವೆಂಬುದಾಗಿ ಕಾಮವು ಎರಡು ವಿಧ. ಸತ್ಕಾಮನೆ ಮನದಲ್ಲಿ ಮೂಡಬೇಕಾದರೆ ದುಷ್ಟಕಾಮನೆ (ಇಚ್ಛೆ)ಯನ್ನು ಮನದಿಂದ ದೂರೀಕರಿಸಬೇಕು. ಅದು ಗದೆಯಿಂದ ಮಾತ್ರ ಸಾಧ್ಯ ಅಲ್ಲವೆ? ಯಾಕೆಂದರೆ ಗದೆ ಮುಖ್ಯವಾಗಿ ಭೀಮಸೇನನ ಆಯುಧವಲ್ಲವೆ? ಭೀಮನು ತನ್ನ ಗದೆಯಿಂದ ತಾನೇ ದುಷ್ಟನಾದ, ಕಾಮಿಯಾದ ಧುರ್ಯೋಧನನ ಊರುಭಂಗಗೊಳಿಸಿದ್ದು! ಪುರುಷಾರ್ಥಗಳಲ್ಲಿ ಒಂದಾದ ಕಾಮವೇ ಶ್ರೇಷ್ಠವೆಂದು ಪ್ರತಿಪಾದಿಸಿದ ಕೀರ್ತಿ ಭೀಮಸೇನನಿಗೇನೇ ಸಲ್ಲುತ್ತದೆಯಷ್ಟೇ! ಬದುಕಲ್ಲಿ ಧರ್ಮದಿಂದ ಅರ್ಥ. ಅರ್ಥದಿಂದ ಕಾಮವನ್ನು ಸಂಪಾದಿಸಿಕೊಳ್ಳಬೇಕು. ಯಾವ ಕಾಮ? ಅಂದರೆ ಧರ್ಮಾಚರಣೆಯನ್ನಾಚರಿಸಬೇಕೆಂಬ ಕಾಮ. ಧರ್ಮ ಮತ್ತು ಅರ್ಥ. ಈ ಎರಡಕ್ಕೂ ಮೂಲಭೂತವಾಗಿ ಮೊದಲು ಇರಬೇಕಾದ್ದು ಕಾಮ. ಅಂದರೆ ಸದಿಚ್ಛೆ. ಈ ಸದಿಚ್ಛೆ ಇಲ್ಲದಿದ್ದರೆ ಧರ್ಮಾರ್ಥಗಳು ಅರ್ಥವಿಲ್ಲದ ಸಂಗತಿಗಳಾಗುತ್ತವೆ. ಆದ್ದರಿಂದಲೇ ಭೀಮ ಕಾಮ ಶ್ರೇಷ್ಠವೆಂಬುದಾಗಿ ಪ್ರತಿಪಾದಿಸಿದ್ದು. ಆದ್ದರಿಂದ ಮೋಕ್ಷವೆಂಬ ಕೊನೆಯ ಪುರುಷಾರ್ಥ ಸಿದ್ಧಿಗಾಗಿ ಈ ಮೂರರ ಸಮ್ಮಿಲನ ಆಗಬೇಕು. ಈ ಚಿಂತನೆಯೊಂದಿಗೆ ಗದಾಮುದ್ರೆಯು ಧರಿಸಲ್ಪಡಬೇಕು.

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ**

ನಾಲ್ಕನೆಯದ್ದು ಪದ್ಮ ಮುದ್ರೆ. ಇದು ಮೋಕ್ಷದ ಸಂಕೇತ. ಪದ್ಮವು ಶಾಂತಿಯ ಸಂಕೇತ. ಶಾಂತಿ=ಮೋಕ್ಷ. (ಶಂ+ಅಂತ=ಸುಖದ ಕೊನೆಯ ಸ್ಥಾನ) ಪದ್ಮವೂ ಕೂಡ ಶಾಂತಿ. ಯಾಕೆಂದರೆ ಶಾಂತಿಯನ್ನು ಅರಸುತ್ತಿರುವ ನಮ್ಮ ಮನ ಮುಂಜಾನೆ ಪದ್ಮ ಅರಳಿದಾಗ ಶಾಂತಿಯ ಭಾವವನ್ನು ಹೊಂದುತ್ತದೆ ತಾನೇ? ಶಾಂತಿಃ ಎಂಬುದಾಗಿ ವೇದ ಮಂತ್ರೋಚ್ಚಾರಣ ಕಾಲದಲ್ಲಿ ಪಠಿಸುವ ಶಬ್ದವೂ ಕೂಡ ಆಗಿರುತ್ತದೆ.

ಹೀಗೆ ಧರ್ಮಾದಿ ಪುರುಷಾರ್ಥ ಸಾಧನೆಯ ಚಿಂತನೆಯ ಜತೆಗೆ ಚಕ್ರಾದಿ ಮುದ್ರೆಗಳು ಧರಿಸಲ್ಪಟ್ಟಾಗ ಇಡೀ ಬದುಕಿನ ಗುರಿಯ ಕಲ್ಪನೆ ನಮ್ಮಲ್ಲಿ ಮೂಡಲು ಸಾಧ್ಯವಾಗುತ್ತದೆಯಲ್ಲವೆ? ಆದ್ದರಿಂದ ಮುದ್ರೆಗಳನ್ನು ಧರಿಸುವಿಕೆಯು ಕೇವಲ ವೈಷ್ಣವತ್ವದ ಆವೇಶವಾಗಿರದೇ, ಪ್ರದರ್ಶನದ ಡಾಂಭಿಕತನವಾಗದೇ, ಪುರುಷಾರ್ಥಗಳನ್ನು ಸಾಧಿಸುವ ಛಲ, ಗುರಿ ನಮ್ಮದಾಗಬೇಕೆಂದು ಆಶಿಸೋಣ. ★

---

(15ನೇ ಪುಟದಿಂದ)

ಅಮ್ಮನ ಸ್ವಾರ್ಥ, ಮಕ್ಕಳ ಅಸಹಕಾರ, ಅದರ ದುಷ್ಪರಿಣಾಮ, ಆಪತ್ತಿನಿಂದ ಪಾರಾಗಲು ಹೊಳೆದ ದುರಾಲೋಚನೆಗಳು, ದೈವನಿರ್ಣಯದ ವಿಚಿತ್ರಲೀಲೆ ಇವೆಲ್ಲವನ್ನು ಈ ಕಥೆಯಲ್ಲಿ ಕಾಣಬಹುದು.

ಮಕ್ಕಳು ತಾಯಿಯ ಮಾತು ಕೇಳದೆ ಅವಳ ಕೋಪಕ್ಕೆ ಶಾಪಕ್ಕೆ ಬಲಿಯಾಗಬಾರದು ಎನ್ನುವ ನೀತಿಯೂ ಇಲ್ಲಿದೆ. ತಾಯಿಯೂ ತನ್ನ ಅಸೂಯೆಯ ಸ್ವಾರ್ಥಕ್ಕೆ ಮಕ್ಕಳನ್ನು ಹಿಂಸಿಸಬಾರದು ಎನ್ನುವ ಎಚ್ಚರಿಕೆಯೂ ಇಲ್ಲಿದೆ. ಸಣ್ಣ ಬುದ್ಧಿಯವರಿಂದ ದೂರವಿರಬೇಕು ವಾಸುಕಿಯಂತೆ.

ವಾಸುಕಿಯ ಮಂತ್ರಾಲೋಚನೆಯ ಸಭೆಯಲ್ಲಿ ನಾಗಗಳಿತ್ತ ಸಲಹೆಗಳನ್ನು ಕೇಳಿದರೆ ಇಂದಿನ ಕುತಂತ್ರದ ರಾಜಕಾರಣದ ಗುಪ್ತ ಸಭೆಯ ನಿರ್ಣಯಗಳಂತೆ ಕಂಡರೆ ಅಚ್ಚರಿಯಿಲ್ಲ!

ಎಂದಿಗೂ ನಮಗೆ ಆಪತ್ತು ಬಂದಾಗ ಧರ್ಮ ಮೂಲದ ಪರಿಹಾರದ ಬಗ್ಗೆ ಯೋಚನೆ ಮಾಡಬೇಕು. ವಾಮಮಾರ್ಗದ ಪರಿಹಾರದ ನಿರ್ಧಾರ ಸರ್ವಥಾ ತಪ್ಪು. ಮತ್ತೊಬ್ಬರನ್ನು ಪೀಡಿಸುವ ದುರುಳರಿಗೆ ದೈವವೇ ಮರಣದಂಡನೆ ವಿಧಿಸುತ್ತದೆ ಎಂಬ ಮಾರ್ಮಿಕ ಸಂದೇಶವೂ ಇಲ್ಲಿದೆ.

ದುಷ್ಕರ್ಮದಿಂದ ಸುಖವಿಲ್ಲ. ಧರ್ಮದಿಂದ ದುಃಖವಿಲ್ಲ. **ನಾಸತೋ ವಿದ್ಯತೇ ಭಾವಃ ನಾಭಾವೋ ವಿದ್ಯತೇ ಸತಃ** ಎಂಬ ಗೀತಾಸಂದೇಶಕ್ಕೆ ಇದು ನಿದರ್ಶನವಾಗಿದೆ. ★

**ಭಾರತೀಯ ಸಂಸ್ಕೃತಿ–ವಿದ್ಯೆಗಳನ್ನು ಕಲಿಯಲು ತೊಡಗಿರಿ**

ಮುಖಪುಟಲೇಖನ

# ನಾರಾಯಣ

–ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

ಕೇಶವಾದಿ ಚತುರ್ವಿಂಶತಿಮೂರ್ತಿಗಳಲ್ಲಿ ಎರಡನೆಯದು ನಾರಾಯಣರೂಪ. ಭಗವಂತನ ಈ ರೂಪವು ಪುಷ್ಯಮಾಸಕ್ಕೆ ನಿಯಾಮಕವಾಗಿದೆ. ಈ ನಾರಾಯಣನನ್ನು ಮೇಲಿನ ಬಲಗೈಯಲ್ಲಿ ಪದ್ಮ ಎಡಗೈಯಲ್ಲಿ ಗದೆ, ಕೆಳಗಿನ ಎಡಗೈಯಲ್ಲಿ ಚಕ್ರ ಬಲಗೈಯಲ್ಲಿ ಶಂಖವನ್ನು ಧರಿಸಿದವನನ್ನಾಗಿ ಚಿಂತನೆಮಾಡಬೇಕೆಂದು ಶ್ರೀಮಧ್ವಾಚಾರ್ಯರು ತಂತ್ರಸಾರಸಂಗ್ರಹ ಗ್ರಂಥದಲ್ಲಿ ತಿಳಿಸಿದ್ದಾರೆ.

ಉಪನಿಷತ್ತುಗಳಲ್ಲಿಯೂ ಭಗವಂತನ ನಾರಾಯಣರೂಪದ ಚಿಂತನೆ ಬಹಳ ಕಡೆ ಕಂಡುಬರುತ್ತದೆ. ಮಹಾನಾರಾಯಣೋಪನಿಷತ್ತಿನ ನಾರಾಯಣಸೂಕ್ತದಲ್ಲಿ "ನಾರಾಯಣಂ ಮಹಾಜ್ಞೇಯಂ" ಎಂದು ನಾವು ಜಗತ್ತಿನಲ್ಲಿ ತಿಳಿದುಕೊಳ್ಳಬೇಕಾದ ವಸ್ತುಗಳಲ್ಲಿ ಶ್ರೇಷ್ಠವಾದವ ಮುಖ್ಯವಾದವ ನಾರಾಯಣ ಎಂದು ತಿಳಿಸಿದ್ದಾರೆ. ನಾರಾಯಣನ ಜ್ಞಾನಾರ್ಜನೆಯನ್ನು ಮಾಡಿಕೊಳ್ಳುವುದು ಜೀವನದ ಮುಖ್ಯ ಉದ್ದೇಶವಾಗಿರಬೇಕೆಂದು ಆ ಮಾತಿನ ತಾತ್ಪರ್ಯ. ನಾರಾಯಣೋಪನಿಷತ್ತಿನಲ್ಲಿ "ನಾರಾಯಣಾತ್ ಪ್ರಾಣೋ ಜಾಯತೇ" ಎಂಬುದಾಗಿ ಆರಂಭಿಸಿ ಪ್ರಾಣದೇವರು ಬ್ರಹ್ಮದೇವರು ಇವರೇ ಮೊದಲಾಗಿ ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳೂ ಕೂಡ ನಾರಾಯಣನಿಂದಾಗಿಯೇ ಸೃಷ್ಟಿಸಲ್ಪಟ್ಟಿವೆ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ನಾರಾಯಣನ ಲಕ್ಷಣವನ್ನೂ ಕೂಡ "ನಿಷ್ಕಲೋ ನಿರಂಜನೋ ನಿರ್ವಿಕಲ್ಪೋ ನಿರಾಖ್ಯಾತಃ ಶುದ್ಧೋ ದೇವ ಏಕೋ ನಾರಾಯಣಃ। ನ ದ್ವಿತೀಯೋಸ್ತಿ ಕಶ್ಚಿತ್" ಎಂದು ತಿಳಿಸಿದ್ದಾರೆ. ನಿಷ್ಕಲ=ಮನುಷ್ಯರಂತೆ ನಾಮಾದಿಷೋಡಶಕಲಾರಹಿತನಾದ ನಿರಂಜನ=ದೋಷರಹಿತನಾದ ನಿರ್ವಿಕಲ್ಪ=ತನಗಿಂತ ಭಿನ್ನವಾದ ಗುಣಧರ್ಮರಹಿತನಾದವ ನಿರಾಖ್ಯಾತ=ಪೂರ್ತಿಯಾಗಿ ಹೇಳಿ ಮುಗಿಸಲು ಆಗದ ಖ್ಯಾತಿವುಳ್ಳವ ಶುದ್ಧ=ಪಾಪಪುಣ್ಯದ ಲೇಪವಿಲ್ಲದವ, ದೇವ=ಕ್ರೀಡಾದಿ ಗುಣವಿಶಿಷ್ಟನಾದವ ಏಕ=ಅನ್ಯನಿರಪೇಕ್ಷನಾದವನು ನಾರಾಯಣ. ಇವನಿಗಿಂತ ಮಿಗಿಲಾದವ ಮತ್ತೊಬ್ಬ ಯಾರೂ ಇಲ್ಲ ಎಂದು ಈ ಉಪನಿಷತ್ತಿನ ವಾಕ್ಯದ ತಾತ್ಪರ್ಯ. ನಾರಾಯಣೋಪನಿಷತ್ತಿನಲ್ಲಿ "ಓಂ ನಮೋ ನಾರಾಯಣಾಯೇತಿ ಮಂತ್ರೋಪಾಸಕಃ। ವೈಕುಂಠಭುವನಲೋಕಂ ಗಮಿಷ್ಯತಿ॥ ಎಂದು ನಾರಾಯಣ ಮಂತ್ರವನ್ನು ಜಪಿಸಿ

**ಹಸಿದವರಿಗೆ ಅನ್ನವನ್ನು ನೀಡಿ**

ನಾರಾಯಣರೂಪಿ ಭಗವಂತನನ್ನು ಧ್ಯಾನಿಸಿದರೆ ವೈಕುಂಠಲೋಕವನ್ನು ಹೊಂದುತ್ತಾರೆ. ಎಂದು ಈ ನಾರಾಯಣ ಮಂತ್ರದ ವೈಶಿಷ್ಟ್ಯವನ್ನು ತಿಳಿಸಿದ್ದಾರೆ. ಶ್ರೀಮನ್‌ಮಧ್ವಾಚಾರ್ಯರು ದ್ವಾದಶಸ್ತೋತ್ರದಲ್ಲಿ ಕೇಶವಾದಿ ದ್ವಾದಶಮೂರ್ತಿಗಳನ್ನು ಸ್ತುತಿಸುತ್ತಾ **ನಾರಾಯಣಾಮಲಕಾರಣವಂದೇ ಕಾರಣಕಾರಣ ಪೂರ್ಣವರೇಣ್ಯ** ಎಂದು ನಾರಾಯಣನನ್ನು ಸ್ತುತಿಸಿದ್ದಾರೆ. ಇಲ್ಲಿ ಅಮಲ=ದೋಷರಹಿತ ಕುಂದು ಕೊರತೆ ಇಲ್ಲದವನು ಎಂದು ಅರ್ಥ. ಕಾರಣ=ಕ+ಅರಣ ಕ=ಸುಖ, ಅರಣ=ಆಶ್ರಯ, ಸುಖಕ್ಕೆ ಆಶ್ರಯನಾದವನು ಎಂದು ಅರ್ಥ. ಕಾರಣಕಾರಣ=ಜಗತ್ತಿನಲ್ಲಿ ನಿಮಿತ್ತಕಾರಣ ಉಪದಾನಕಾರಣ ಎಂದು ಎಷ್ಟಿದೆಯೋ ಅಷ್ಟಕ್ಕೂ ಕೂಡ ಕಾರಣನಾದವನು ಎಂದು ಅರ್ಥ. ಪೂರ್ಣ=ಪೂರ್ಣನಾದವನು, ವರೇಣ್ಯ=ಶ್ರೇಷ್ಠನಾದವನು ಇಂತಹ ನಾರಾಯಣನಿಗೆ ನಮಸ್ಕಾರ ಎಂದು ಸ್ತುತಿಸಿದ್ದಾರೆ.

**ಶರಣುಹೊಕ್ಕೆನಯ್ಯ ಎನ್ನ ಮರಣಸಮಯದಲ್ಲಿ ನಿನ್ನ ಚರಣಸ್ಮರಣೆ ಕರುಣಿಸಯ್ಯ ನಾರಾಯಣ** ಎಂದು ಕನಕದಾಸರು ನಾರಾಯಣನ ಕೀರ್ತನೆ ಮಾಡಿದ್ದಾರೆ. ನಾವು ಸದ್ಗತಿಯನ್ನು ಪಡೆಯಬೇಕಾದರೆ ಮರಣಸಮಯದಲ್ಲಿ ಭಕ್ತಿಪೂರ್ವಕವಾಗಿ ಭಗವಂತನನ್ನು ಸ್ಮರಿಸಬೇಕು. ಜೀವಮಾನವಿಡೀ ಭಗವಂತನನ್ನು ನೆನೆಯದೇ ಮರಣಸಮಯದಲ್ಲಿ ಭಗವಂತನನ್ನು ನೆನೆಯುತ್ತೇನೆಂದರೆ ಅದು ಸಾಧ್ಯವಿಲ್ಲ. ಏಕೆಂದರೆ ಮನಸ್ಸು ಸಂಸ್ಕಾರವಿಲ್ಲದೆ ಯಾವ ಕೆಲಸವನ್ನು ಮಾಡುವುದಿಲ್ಲ. ಸದಾಕಾಲ ಭಗವಂತನ ಸ್ಮರಣೆ ಮಾಡುತ್ತಿದ್ದರೆ ಆ ಸಂಸ್ಕಾರದಿಂದ ಕೊನೆಗಾಲದಲ್ಲಿ ಭಗವಂತನ ಸ್ಮರಣೆಯು ಉಂಟಾಗುತ್ತದೆ. ಕೊನೆಗಾಲದಲ್ಲಿ ಭಗವಂತನನ್ನು ಭಕ್ತಿಯಿಂದ ನೆನೆದರೆ ಭಗವಂತನ ಅನುಗ್ರಹ ಖಂಡಿತ. ಅದನ್ನೇ ಕನಕದಾಸರು ನಾರಾಯಣನೇ ನಿನ್ನನ್ನು ಮೊರೆಹೊಕ್ಕುತ್ತೇನೆ ನನ್ನ ಕೊನೆಗಾಲದಲ್ಲಿ ನಿನ್ನ ಪದಪದ್ಮಗಳ ಸ್ಮರಣೆಯನ್ನು ಕರುಣಿಸು ಎಂದು ಪ್ರಾರ್ಥಿಸಿದ್ದಾರೆ. ಪುರಂದರದಾಸರು **ಹರಿ ನಾರಾಯಣ** ಎಂಬ ಕೀರ್ತನೆಯಲ್ಲಿ ಭಗವನ್ನಾಮಸ್ಮರಣೆಯನ್ನು ರಸವತ್ತಾದ ಹಣ್ಣಿಗೆ ಹೋಲಿಸಿ ನಾರಾಯಣನ ಸ್ಮರಣೆ ಮಾಡಿ ಸದ್ಗತಿಯನ್ನು ಪಡೆದವರ ಪಟ್ಟಿಯನ್ನು ವಿಶಿಷ್ಟವಾದ ರೀತಿಯಲ್ಲಿ ಮಾಡಿದ್ದಾರೆ. ಈ ರೀತಿಯಾಗಿ ಉಪನಿಷತ್ತುಗಳಿಂದ ಹಾಗೂ ಮಹಾಮಹಿಮರಾದ ಮಧ್ವಾಚಾರ್ಯರಿಂದ ಋಷಿಮುನಿಗಳಿಂದ ದಾಸ ಶ್ರೇಷ್ಠರಿಂದ ಸ್ತುತಿಸಲ್ಪಟ್ಟಂತಹ ನಾರಾಯಣನ ಮಹಿಮೆಯನ್ನು ಕೊಂಡಾಡಿ ನಾವೂ ಕೂಡ ಯತ್‌ಕಿಂಚಿತ್ ಮಹಿಮೋಪನ್ನರಾಗೋಣ.

★

**ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ**

# ವಿಷ್ಣು ಹಾಗೂ ಅವನ ಅಂತರ್ಯಾಮಿತ್ವ, ಸರ್ವಶಬ್ದ ವಾಚ್ಯತ್ವ

–ಸಗ್ರಿ ರಾಘವೇಂದ್ರ ಉಪಾಧ್ಯಾಯ

ವರ್ಕಾಡಿ ಎಂದು ಪ್ರಾಕೃತಭಾಷೆಯಲ್ಲಿ ವ್ಯವಹಿಸಲ್ಪಡುವ 'ಏಕವಾಟ' ದಲ್ಲಿ ಶ್ರೀಮಧ್ವಗುರುಗಳು ತಮ್ಮ ಶಿಷ್ಯರ ಮೂಲಕ ಪದ್ಮತೀರ್ಥನನ್ನು ತಡೆದು ಅವನ ಶಾಸ್ತ್ರವನ್ನು ಸಾಧಿಸಲು ತಿಳಿಸಲು **'ಕೃತಕೃತ್ಯೋಸ್ಮಿ ಮಚ್ಛಾಸ್ತ್ರಂ ವ್ಯಾಪ್ತಂ'** ನನ್ನ ಶಾಸ್ತ್ರ ಎಲ್ಲೆಡೆ ಹರಡಿದೆ. ಇದರಿಂದ ನಾನು ಧನ್ಯ. ನನಗೇನೂ ಸಾಧಿಸಬೇಕಾದ ಅವಶ್ಯಕತೆ ಇಲ್ಲ ಎನ್ನುವನು.

ನನ್ನ ಶಾಸ್ತ್ರ ಮೂರುಲೋಕಗಳಲ್ಲೂ ಹರಡಿದೆ. ನಿನ್ನ ಶಾಸ್ತ್ರ ಅಲ್ಲ–ಎಂದು ಶ್ರೀಮಧ್ವರು ಅದಕ್ಕೆ ಪ್ರತಿಯಾಗಿ ಹೇಳಲು ಆಗ ಪದ್ಮತೀರ್ಥನು ಉದ್ಗರಿಸುವನು– **'ಅಂತರ್ಯಾಮೀ ಹಂತ ವೇದ ತವೇದಂ ಶಾಠ್ಯಭಾಷಿತಮ್'** ನಿಮ್ಮ ಈ ಮೋಸದ ಹೇಳಿಕೆಯ ಆಂತರ್ಯವನ್ನು ಅಂತರ್ಯಾಮಿ ತಿಳಿದಿರುವನು ತಾನೇ?

ಇದಕ್ಕೆ ನಗುತ್ತ ಶ್ರೀಮಧ್ವರು ಕೊಟ್ಟ ಉತ್ತರ–

**ವ್ಯಾಪ್ತಂ ತ್ವಯ್ಯೇವ ಮಚ್ಛಾಸ್ತ್ರಂ ಕಿಮುತಾನ್ಯತ್ರ ಬಾಲಿಶ ।**
**ಅಂತರ್ಯಾಮೀ ನಿಯಮ್ಯಶ್ಚ ತ್ವಯೈವಾಂಗೀಕೃತಾವಿತಿ**

ನೀನೇ ಭಗವಂತನನ್ನು ಅಂತರ್ಯಾಮಿಯನ್ನಾಗಿಯೂ, ಉಳಿದವರೆಲ್ಲ ಅವನಿಂದ ನಿಯಮ್ಯರೆಂದೂ ಈಗಾಗಲೇ ಒಪ್ಪಿಕೊಂಡು, ಅದರ ಆಧಾರದಲ್ಲಿ ಹಾಗೆಯೇ ವ್ಯವಹರಿಸಿದ್ದಿ ಎಂದ ಮೇಲೆ ಭಗವಂತನ ಅಂತರ್ಯಾಮಿತ್ವವನ್ನು ಎತ್ತಿ ಸಾರಿರುವ ನನ್ನ ಶಾಸ್ತ್ರ ನಿನ್ನಲ್ಲಿ ಹರಡಿದೆ ಎಂದೇ ಅರ್ಥ. ನಿನ್ನಲ್ಲೇ ಹರಡಿದೆ ಎಂದ ಮೇಲೆ ಉಳಿದವರಲ್ಲಿ ಅದು ವ್ಯಾಪಿಸಿರಲೇ ಬೇಕು ತಾನೆ?

ನಾರಾಯಣಪಂಡಿತರ ಭಾವಪ್ರಕಾಶಿಕಾದಲ್ಲಿ (12–46 ಮ.ವಿ) ಮಧ್ವರಶಿಷ್ಯರಿಂದ ಮಾಡಲ್ಪಟ್ಟ ಶ್ಲೋಕಗಳೆಂದು ಉಲ್ಲೇಖಿಸಲ್ಪಟ್ಟ ಆರೂಶ್ಲೋಕಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವಂತೆ ಮಧ್ವಗುರುಗಳು ಭಗವಂತನ ಅಂತರ್ಯಾಮಿತ್ವ ಪ್ರಮೇಯ ತನ್ನ ಶಾಸ್ತ್ರದ ಪ್ರಮುಖ ಪ್ರಮೇಯಗಳಲ್ಲೊಂದು ಎಂದು ಉದ್ಘೋಷಿಸಿರುವರು. ಆದುದರಿಂದ ಅಂತಹ ಏಕವಾಟದ ಮಹಾವಿಷ್ಣುವಿನ ಸನ್ನಿಧಿಯಲ್ಲಿ ಅವನ ಅಂತರ್ಯಾಮಿತ್ವದ ಚಿಂತನೆ ಔಚಿತ್ಯ ಪೂರ್ಣ. **ದೇವರು ಸರ್ವೋತ್ತಮ–** ದೇವರು ಎಂದು ಒಪ್ಪಿಕೊಳ್ಳಲಾಗಿದೆ ಎಂದರೆ ದೇವರು ಎನಿಸಿರುವವನಲ್ಲಿ ಸರ್ವೋತ್ತಮತ್ವವನ್ನು ಒಪ್ಪಿಕೊಳ್ಳಲೇಬೇಕು. ಎಲ್ಲರಿಗಿಂತ ಉತ್ತಮನಾದವನಷ್ಟೇ ಆ ಎಲ್ಲರ ಬದುಕಿನಲ್ಲಿ ಪ್ರಭಾವಕಾರಿಯಾದ ಪಾತ್ರವನ್ನು ವಹಿಸಿ ಅವರೆಲ್ಲರ ಗೌರವಾದರಗಳಿಗೆ

ಗೋಚರನಾಗಿ ಮೆರೆಯಬಲ್ಲ ತಾನೇ! ಆದುದರಿಂದಲೇ ಮಧ್ವಗುರುಗಳು ತಮ್ಮ ಶಾಸ್ತ್ರದಲ್ಲಿ ದೇವರ ಸರ್ವೋತ್ತಮತ್ವಗುಣಕ್ಕೆ ಅತ್ಯಧಿಕ ಪ್ರಾಶಸ್ತ್ಯವನ್ನು ನೀಡಿರುವರು.

**ಸರ್ವೋತ್ತಮತ್ವ–ಸರ್ವಾಂತರ್ಯಾಮಿತ್ವ–** ಹೀಗೆ ದೇವರು ಸರ್ವೋತ್ತಮನೆನಿಸಬೇಕೆಂದರೆ ಸರ್ವಾಂತರ್ಯಾಮಿ ಎನಿಸಲೇಬೇಕು. ಅಂದರೆ ಎಲ್ಲರ ಒಳಗೆ ಇದ್ದು ಸ್ವತಂತ್ರನಾಗಿ ಅವರ ಚಟುವಟಿಕೆಗಳನ್ನೆಲ್ಲ ಪ್ರೇರಿಸುವವನಷ್ಟೇ ಅವರೆಲ್ಲರನ್ನು ತನ್ನ ವಶದಲ್ಲಿಟ್ಟುಕೊಂಡು ಅವರೆಲ್ಲರಿಗಿಂತ ಉತ್ತಮನೆನಿಸಬಲ್ಲ. ಈ ರೀತಿಯಾಗಿ ದೇವರ ಸರ್ವೋತ್ತಮತ್ವವು ಅವನ ಸರ್ವಾಂತರ್ಯಾಮಿತ್ವ ಗುಣವನ್ನು ಅವಲಂಬಿಸಿ ಇದೆ. ಅದಕ್ಕಾಗಿಯೇ ಭಗವಂತನ ಸರ್ವೋತ್ತಮತ್ವವನ್ನು ಸಮರ್ಥಿಸುವ ಮಧ್ವಗುರುಗಳು ಅದಕ್ಕೆ ಪೂರಕವಾಗಿ ಅವನ ಸರ್ವಾಂತರ್ಯಾಮಿತ್ವವನ್ನೂ ಅಷ್ಟೇ ನೈರ್ಭರ್ಯದಿಂದ ಸಾಧಿಸಿರುವರು.

**ಸರ್ವಾಂತರ್ಯಾಮಿತ್ವ–ಸರ್ವಶಬ್ದವಾಚ್ಯತ್ವ–**ದೇವರು ಸರ್ವಾಂತರ್ಯಾಮಿಯಾಗಿ ಪ್ರತಿಯೊಬ್ಬ ವ್ಯಕ್ತಿಯ ಚಟುವಟಿಕೆಗಳನ್ನೆಲ್ಲ ಪ್ರೇರಿಸುವನೆಂದರೆ ಆಯಾ ಚಟುವಟಿಕೆಯ ಹಿನ್ನೆಲೆಯಲ್ಲಿ ಹೊರಟಿರುವ ಆಯಾನಾಮಗಳಿಂದ, ಶಬ್ದಗಳಿಂದ ಮುಖ್ಯವಾಗಿ ಅವನೇ ವಾಚ್ಯನೆನಿಸಬೇಕು. ಉದಾಹರಣೆಗೆ: ಐಶ್ವರ್ಯ ಎನಿಸುವ ಸಾಮರ್ಥ್ಯದ ಚಟುವಟಿಕೆಯ ಹಿನ್ನೆಲೆಯಲ್ಲಿ ಹೊರಟಿರುವ ಇಂದ್ರನಾಮ ಶಚೀಪತಿಗಿಂತಲೂ ಮುಖ್ಯವಾಗಿ ಭಗವಂತನನ್ನೇ ಹೇಳುವುದು. ಹೀಗೆ ಸರ್ವಾಂತರ್ಯಾಮಿತ್ವಕ್ಕೂ ಸರ್ವಶಬ್ದ ವಾಚ್ಯತ್ವಕ್ಕೂ ಪ್ರಯೋಜ್ಯ ಪ್ರಯೋಜಕ ಭಾವಸಂಬಂಧ ಇರುವುದರಿಂದ ದೇವರನ್ನು ಸರ್ವಾಂತಯಾಮಿ ಎಂದು ಗುರುತಿಸಿಕೊಟ್ಟ ಮಧ್ವಗುರುಗಳು ಅವನ ಸರ್ವಾಂತರ್ಯಾಮಿತ್ವಕ್ಕೆ ಪೂರಕವಾಗುವಂತೆ ಅವನನ್ನು ಸರ್ವಶಬ್ದ ವಾಚ್ಯನನ್ನಾಗಿಯೂ ಪರಿಚಯಿಸಿ ಕೊಟ್ಟಿರುವರು.

**ವಿಷ್ಣುನಾಮಾರೂಢತ್ವ–** ಮಧ್ವಗುರುಗಳು ತಮ್ಮ ಐತರೇಯ ಭಾಷ್ಯದಲ್ಲಿ ಭಗವಂತನ ಅಂತರ್ಯಾಮಿತ್ವವನ್ನೂ, ಸರ್ವಶಬ್ದ ವಾಚ್ಯತ್ವವನ್ನೂ ವಿಷ್ಣುನಾಮಾರೂಢವನ್ನಾಗಿ ಉಪಪಾದಿಸಿರುವರು.

**'ಷಕಾರಃ ಪ್ರಾಣ ಆತ್ಮಾ'–**ಐತರೇಯ ಉಪನಿಷತ್ತಿನ (2–8–7–3) **'ಣಕಾರೋ ಬಲಂ ಷಕಾರಃ ಪ್ರಾಣ ಆತ್ಮಾ'–** ಎಂಬ ಸಂದೇಶದ ಆಂತರ್ಯವನ್ನು ಸ್ಪಷ್ಟಪಡಿಸುತ್ತ ಹೀಗೆ ಪ್ರಮಾಣದ ಮೂಲಕ ವಿವರಿಸಿರುವರು. ವಿಷ್ಣುನಾಮದ ಷಕಾರವು ಚತುರ್ಮುಖನೇ ಮುಂತಾದ ಪ್ರತಿಯೊಬ್ಬರನ್ನೂ ಭಗವಂತನು ಪ್ರೇರಿಸುವವನೆಂದೂ, ಅದಕ್ಕೆ ಬೇಕಾದ ಗುಣಗಳ ವ್ಯಾಪ್ತಿಯೂ, ಕಾಲದ ವ್ಯಾಪ್ತಿಯೂ, ದೇಶದ ವ್ಯಾಪ್ತಿಯೂ ಅವನಲ್ಲಿ ಇದೆ

ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ

ಎಂದೂ ತಿಳಿಸುತ್ತಿದೆ. ಣ ಕಾರವು ಪ್ರೇರಣೆಗೆ ಬೇಕಾದ ಬಲವೂ ಅವನಲ್ಲಿ ಇದೆ ಎಂದೂ ತಿಳಿಸುತ್ತಿದೆ. ಭಗವಂತನಲ್ಲಿರುವ ಪ್ರೇರಕತ್ವ, ವ್ಯಾಪ್ತಿ ಹಾಗೂ ಬಲ ಇತರ ಯಾರಲ್ಲೂ ಇಲ್ಲದಷ್ಟು ವಿಶಿಷ್ಟವಾಗಿರುವದೆಂದು ವಿಷ್ಣುನಾಮದ ಮೊದಲ ಅಕ್ಷರವಿಕಾರ ತಿಳಿಸಿದರೆ ಈ ಗುಣಗಳನ್ನೆಲ್ಲ ಸ್ವಾಭಾವಿಕವಾಗಿ ಹೊಂದಿರುವವನು ಅವನೆಂದು ವಿಷ್ಣುನಾಮದ ಕೊನೆಯ ವರ್ಣ ಉಕಾರವು ತಿಳಿಸುವುದು. ಈ ರೀತಿಯಾಗಿ ಭಗವಂತನ ವಿಷ್ಣುನಾಮವು ಅವನ ಅಂತರ್ಯಾಮಿಯಾಗಿ ಪ್ರೇರಕತ್ವವನ್ನು ಕೇಂದ್ರೀಕರಿಸಿ ಅದಕ್ಕೆ ಪೂರಕವಾಗಿ ಬೇಕಾಗುವ ವ್ಯಾಪ್ತಿ, ಬಲ–ಇವನ್ನು ಸಾರುತ್ತಿದೆ.

**ಅಥ ಕೋಽಹವ್**–ಹೀಗೆ ವಿಷ್ಣುನಾಮರೂಢವಾಗಿ ಭಗವಂತನ ಸರ್ವಾಂತರ್ಯಾಮಿತ್ವವನ್ನು ಸಾರಿರುವ ಐತರೇಯೋಪನಿಷತ್ತು–ಭಗವಂತನು ಎಲ್ಲರಲ್ಲಿ ಪ್ರೇರಣೆಗಾಗಿ ವಿಷ್ಣುನಾಮಕನಾಗಿ ಪ್ರವೇಶಿಸಿರುವನೆಂಬುದನ್ನು ಆಖ್ಯಾಯಿಕೆಯ ಮೂಲಕ (ಐ.ಉ.2–3–3–6....11) ತಿಳಿಸಿಕೊಟ್ಟಿದೆ. ಚತುರ್ಮುಖನ ದೇಹದೊಳಗೆ ಇತರ ಇಂದ್ರಿಯಾಭಿಮಾನಿಗಳು ಪ್ರವೇಶಿಸಿದರೂ ತಮ್ಮ ತಮ್ಮ ಚಟುವಟಿಕೆಯನ್ನು ನಿರ್ವಹಿಸಲು ಅಸಮರ್ಥರಾದರು. ಆತ ಭಗವಂತ ಯೋಚಿಸುವನು. ಒಂದೊಮ್ಮೆ ನನ್ನ ಅನುಗ್ರಹವಿಲ್ಲದೆಯೇ ಅವರು ತಮ್ಮ ತಮ್ಮ ಚಟುವಟಿಕೆಯನ್ನು ನಡೆಸಲು ಸಮರ್ಥರಾದರೆ 'ಅಥಕೋಹವ್' ವಿಷ್ಣು ಎನಿಸುವುದಾದರೂ ಹೇಗೆ? ಯಾಕೆಂದರೆ ಎಲ್ಲರ ಅಂತರ್ಯಾಮಿಯಾಗಿ ಪ್ರೇರಿಸುವುದರಿಂದ ತಾನೇ ನನಗೆ 'ವಿಷ್ಣು' ಎಂಬ ಅನ್ವರ್ಥಕ ನಾಮ. ಈ ನಾಮದ ಸಾರ್ಥಕತೆ ನನ್ನಲ್ಲಿ ಸಿದ್ಧಿಸಬೇಕೆಂದರೆ ನನ್ನ ಅನುಗ್ರಹವಿಲ್ಲದೆ,ಪ್ರೇರಣೆಯಿಲ್ಲದೆ ಬೇರೆ ಯಾವ ದೇವತೆಗಳಿಗೂ ಯಾವ ಚಟುವಟಿಕೆಯನ್ನು ನಿರ್ವಹಿಸಲು ಆಗುವುದೇ ಇಲ್ಲ–ಎಂದಾಗಬೇಕು ತಾನೆ? ಹೀಗೆಂದು ಯೋಚಿಸಿದ. ಭಗವಂತ ಬ್ರಹ್ಮವಾಯುಗಳಿಂದ ಕೂಡಿಕೊಂಡು ಬ್ರಹ್ಮನ ಶರೀರವನ್ನು ಪ್ರವೇಶಿಸಿ ಅಂತರ್ಯಾಮಿಯಾಗಿ ಪ್ರೇರಿಸಿದನು. ಅಂತೆಯೇ ಉಳಿದವರ ಶರೀರವನ್ನು ಪ್ರವೇಶಿಸಿ, ಪ್ರೇರಿಸುತ್ತಿರುವನು. **'ತಥಾ ಜೀವೇಷು ಸರ್ವೇಷು ಪ್ರವಿಷ್ಟಃ ಪ್ರೇರಣೇಚ್ಛಯಾ'**

**ತದ್ವ್ಯಾಖ್ಯಾನ್ಯತ್ ವಚೋಽಖಿಲಮ್**–ಪ್ರತಿಯೊಂದು ಶಬ್ದದ ಪ್ರವೃತ್ತಿನಿಮಿತ್ತದ ಕುರಿತಾದ ಒಡೆತನ ಹಾಗೂ ಹೊಂದಿರುವಿಕೆ ಇವುಗಳನ್ನಿಟ್ಟು ಭಗವಂತನಿಗೆ ಸರ್ವಶಬ್ದವಾಚ್ಯತ್ವವನ್ನು **'ತಾ ವಾ ಏತಾ ಸರ್ವಾ ಋಚಃ... ಏಕೈವ ವ್ಯಾಹೃತಿಃ ಪ್ರಾಣ ಏವ'** (ಐ.ಉ.2–1–2–12) ಎಂಬ ಮಾತಿನ ಆಧಾರದಲ್ಲಿ ಸಮರ್ಥಿಸಿರುವ ಶ್ರೀಮಧ್ವರು

ಪ್ರಾಣಿಹಿಂಸೆ ಮಾಡಬೇಡಿ

ಐತರೇಯೋಪನಿಷತ್ತಿನ ಕೊನೆಯ ಬ್ರಾಹ್ಮಣದಲ್ಲಿ ಪ್ರತಿಯೊಂದು ಶಬ್ದಕ್ಕೆ ಸಂಬಂಧಿಸುವ ಸಂಹಿತಾ ಎನಿಸುವ ಎರಡು ಅಕ್ಷರಗಳ ಜೋಡಣೆ ವಿಷ್ಣುನಾಮದ ಅರ್ಥವನ್ನೇ ಅಂದರೆ ಚಟುವಟಿಕೆಗೆ ಬೇಕಾದ ಪ್ರೇರಣೆ, ವ್ಯಾಪ್ತಿ, ಬಲ– ಇವನ್ನೇ ತಿಳಿಸುವುದರಿಂದ ಉಳಿದೆಲ್ಲ ಮಾತುಗಳೂ ವಿಷ್ಣುನಾಮಾರ್ಥದ ವ್ಯಾಖ್ಯಾನ–**ವಿಷ್ಣುನಾಮೋದಿತೋ ಯೋऽರ್ಥಸ್ತದ್ವ್ಯಾಖ್ಯಾऽನ್ಯತ್ ವಚೋऽಖಿಲಮ್**–(ಐ.ಉ.ಭಾ.2–8–7–7) ಎಂದು ಸ್ಪಷ್ಟಪಡಿಸುವ ಮೂಲಕ ವಿಷ್ಣುನಾಮಾರ್ಥದ ವ್ಯಾಖ್ಯಾನರೂಪದಲ್ಲಿರುವ ಎಲ್ಲ ಶಬ್ದಗಳೂ ಅಂತಹ ವಿಷ್ಣುನಾಮವನ್ನು ಹೊಂದಿರುವ ಭಗವಂತನನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತಿದ್ದು ಅವನ ನಾಮಗಳೇ ಆಗಿವೆ ಎಂದು ಪ್ರತಿಪಾದಿಸಿ ಅವನ ಸರ್ವಶಬ್ದವಾಚ್ಯತ್ವವನ್ನು ಮತ್ತೊಂದು ಬಗೆಯಿಂದ ವಿಷ್ಣುನಾಮಾರೂಢವಾಗಿ ಸಮರ್ಥಿಸಿರುವರು.

## ಏಕವಾಟದ ಮಹಾವಿಷ್ಣುವಿನ ಸನ್ನಿಧಾನದಲ್ಲಿ

**'.......ಚಕ್ರೇ ವಾಸಂ ಶೇಷಶಯ್ಯೇ ಶಯಾನೇ । ಗ್ರಾಮೇ ವಾತೈಃ ಪಾವಿತೇ ಕಾಣ್ವತೀರ್ಥೈರ್ಭಕ್ತಪ್ರೀತ್ಯಾ ಸನ್ಮತೇऽನೂನಬೋಧಃ'** ಎಂಬ ಮಧ್ವವಿಜಯದ ಮಾತಿನಲ್ಲಿ (15–140) ತಿಳಿಸಿರುವಂತೆ ಪಶ್ಚಿಮದಿಕ್ಕಿನ ಕಣ್ವತೀರ್ಥಗ್ರಾಮದಿಂದ ಬೀಸಿ ಬರುತ್ತಿದ್ದ ಪವಿತ್ರ ಗಾಳಿಯಿಂದ ಪವಿತ್ರವಾದ ತಾಂತ್ಯ ಹೆಸರಿನ ಗ್ರಾಮದಿಂದ ಕೂಡಿಕೊಂಡಿರುವ ಏಕವಾಟದ 'ಸನ್ಮತ' ಎಂಬ ಬಿರುದಿಗೆ ಪಾತ್ರವಾಗಿದ್ದ ಮಹಾವಿಷ್ಣುವಿನ ದೇವಾಲಯದಲ್ಲಿ ಭಕ್ತರ ಒತ್ತಾಯಕ್ಕೆ ಮಣಿದು ಚಾತುರ್ಮಾಸ್ಯ ವ್ರತವನ್ನು ಕೈಗೊಂಡಿದ್ದ ಶ್ರೀಮಧ್ವಗುರುಗಳು ತಾವು ಕೈಗೊಂಡಿದ್ದ ಚಾತುರ್ಮಾಸ್ಯದ 120 ದಿನಗಳ ಅವಧಿಯಲ್ಲಿ ನಡೆಸುತ್ತಿದ್ದ ಪಾಠಪ್ರವಚನಗಳಲ್ಲಿ ಒಮ್ಮೆಯಾದರೂ ಭಗವಂತನ ಸರ್ವಾಂತರ್ಯಾಮಿತ್ವವನ್ನೂ, ಸರ್ವಶಬ್ದವಾಚ್ಯತ್ವವನ್ನೂ ವಿಷ್ಣುನಾಮಾರೂಢವಾಗಿ ಚಿಂತನೆ ನಡೆಸಿ ಆ ಜ್ಞಾನಪುಷ್ಪವನ್ನು ಧ್ಯಾನಪುಷ್ಪವನ್ನು ಮಹಾವಿಷ್ಣುವಿನ ಪಾದಾರವಿಂದಕ್ಕೆ ಸಮರ್ಪಿಸದೆ ಇರುವ ಸಾಧ್ಯತೆಯೇ ಇಲ್ಲ. ಸುಮಾರು ಎಂಟುನೂರು ವರ್ಷಗಳ ಹಿಂದೆ ಮಧ್ವಗುರುಗಳು ಸಮರ್ಪಿಸಿದ್ದ ಆ ಬಗೆಯ ಜ್ಞಾನಪುಷ್ಪದಿಂದ ಪ್ರಸನ್ನನಾಗಿದ್ದ ಮಹಾವಿಷ್ಣುವಿನ ಅಡಿಗಳಿಗೆ ನಾವೂ ಮಹೋತ್ಸವದ ಪ್ರಸನ್ನತೆಯ ಈ ಸಂದರ್ಭದಲ್ಲಿ ಅದೇ ಗಿಡದಲ್ಲಿ ಅರಳಿದ ಜ್ಞಾನಪುಷ್ಪವನ್ನು ಗುರುಗಳ ಮೂಲಕ ಸಮರ್ಪಿಸಿ ಅದರಿಂದ ಅವನ ಪ್ರಸಾದಾತಿಶಯವನ್ನು ಪ್ರಾರ್ಥಿಸೋಣ.

*(ಏಕವಾಟದ ಮಹಾವಿಷ್ಣುವಿನ ಸನ್ನಿಧಾನದಲ್ಲಿ ನಡೆದ ವಾರ್ಷಿಕಮಹೋತ್ಸವದ ಸಂದರ್ಭದಲ್ಲಿ ಶ್ರೀ ಶ್ರೀ ವಿದ್ಯಾಧೀಶತೀರ್ಥರ ಮೂಲಕ ಮಹಾವಿಷ್ಣುವಿನ ಅಡಿಗೆ ಸಮರ್ಪಿತವಾದ ಜ್ಞಾನಪುಷ್ಪ–ಧ್ಯಾನಪುಷ್ಪ.)*

**ನೀಚರನ್ನಾಶ್ರಯಿಸಿ ಕೆಡಬೇಡಿ**

ಪ್ರಶ್ನೋತ್ತರ–ಪದಬಂಧ

# ನೆನಪಿನ ಅಂಗಳ

–ವಿ॥ ಶಂಕರನಾರಾಯಣಾಚಾರ್ಯ

1) ಭಗವದ್ಗೀತೆಯ ಪ್ರಾರ್ಥನಾ ಶ್ಲೋಕಗಳನ್ನು ರಚಿಸಿದವರಾರು?

2) 'ಭಗವದ್ಗೀತೆ' ಯಾವ ಮಹಾಕಾವ್ಯದ ಒಂದು ಭಾಗ?

3) 'ಕುವೆಂಪು' ರವರ ಪೂರ್ಣ ಹೆಸರೇನು?

4) ಕೃಷ್ಣನು 'ಗೀತೋಪದೇಶ' ಮಾಡಿದ ಸ್ಥಳ ಯಾವುದು?

5) ಶಿವರಾಮಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ ಯಾವುದು?

6) ಎಂಟನ್ನು ಎಂಟು ಬಾರಿ ಬಳಸಿ (ಗಣಿತದ ಯಾವುದೇ ಚಿಹ್ನೆಯನ್ನು ಬಳಸಿ) ಉತ್ತರ ಸಾವಿರ ಬರುವಂತೆ ಮಾಡಬಲ್ಲಿರಾ?

7) ಕೃಷ್ಣನು ಗೀತೆಯನ್ನು ಯಾರಿಗೆ ಉಪದೇಶಿಸಿದ?

8) ಕೃಷ್ಣಕಥೆಯನ್ನು ತಿಳಿಸುವ ವಾದಿರಾಜರ ಅಮೋಘಕೃತಿಯಾವುದು?

9) 13837ನ್ನು ನಿಮ್ಮ ವಯಸ್ಸಿನಿಂದ ಗುಣಿಸಿ, ಉತ್ತರವನ್ನು 73ರಿಂದ ಗುಣಿಸಿ ಆಶ್ಚರ್ಯಕಾದಿದೆ ನಿಮಗೆ!

10) 'ರಾಜನ್' ಶಬ್ದದ ಸ್ತ್ರೀಲಿಂಗರೂಪ ಸಂಸ್ಕೃತದಲ್ಲಿ ಏನಾಗುತ್ತದೆ?

## ಪದಬಂಧದ ಉತ್ತರ

| | | | | | | | | |
|---|---|---|---|---|---|---|---|---|
| 1 ಶ | ಶೀ | ■ | 3 ರಾ | ■ | ಮ | 6 ಧು | ಮಾ | 7 ಸ |
| ನಿ | ■ | 5 ಬೀ | ಗ | 8 ರು | ■ | ರೀ | ■ | ಮ |
| 4 ವಾ | ರಿ | ಜ | ■ | ಜಿ | ■ | 12 ಣ | ರ | ಮ |
| ರ | ■ | ■ | 9 ವಾ | ನ | 11 ರ | ■ | ■ | ನ |
| ■ | ■ | ■ | ■ | ■ | ದ | ■ | ■ | ■ |
| 13 ರಾ | ■ | ■ | 10 ಕ | ದ | ನ | ■ | ■ | 17 ಪಾ |
| 14 ಜ | ವಾ | 15 ನ | ■ | ■ | ■ | 16 ವಾ | ದೀ | ಶ |
| ಬೀ | ■ | ವೀ | ■ | ■ | ■ | ರಿ | ■ | ರಾ |
| 18 ದಿ | ವಾ | ನ | ರ | ಕಾ | ಲ | ದ | ರಾ | ಜ |

ನಿಜವಾದ ಮರ್ಮವನ್ನರಿಯದ ಮೂರ್ಖರನ್ನು ಎಂದಿಗೂ ಗುರುವೆಂದು ನಂಬದಿರಿ

## ಎಡದಿಂದ ಬಲಕ್ಕೆ:

1) ಇವನು ನಮ್ಮ ದೇಶದೊಡೆಯ (2)
2) ಜನರನ್ನು ಆಕರ್ಷಿಸುವ ಬಗೆ (2)
3) ದಾರ ಇರುವ ಮಾರ್ಗ (2)
4) 'ನಾರಾಯಣನ ಹೆಂಡತಿ ಲಕ್ಷ್ಮಿ' ಹೀಗೆ ಹೇಳೋಣ (3)
7) ಕೋಪಗೊಂಡ ಸಿಂಹ (7)
15) 'ನೀನು ಇರುವಿ' ಎಂದರೆ ಸಂಸ್ಕೃತದಲ್ಲಿ ಖಡ್ಗ ನೆನಪಾದೀತು (2)
16) ಎಲ್ಲಾ ಮತದಲ್ಲೂ ಇರುವ ಕತ್ತಲೆ (2)
17) ನರಕಪತಿತನುಜ (3)
18) ಸೌಂದರ್ಯದೇವತೆಯನ್ನೊಳಗೊಂಡ ಕತ್ತಲೆ (3)
19) ಕಾದ ಮೇಲೆ ಬಂದ ಪತ್ರ ತಿರುಗಿದೆ (3)




ಉತ್ತರ ಮುಂದಿನ ಸಂಚಿಕೆಯಲ್ಲಿ

## ಮೇಲಿನಿಂದ ಕೆಳಕ್ಕೆ:

1) ಸಂಗೀತದ 'ಸ್ವರಹಾರ' (5)
2) ಹಣವಿರುವ 'ಚಂದದ ಹುಡುಗ' (3)
3) ದಾನಿಯಿಂದ ಕೂಡಿರುವ ಜ್ಯೋತಿಷ್ಯದ ಯೋಗ (3)
5) ರಮೆಯಿಂದ ಕೂಡಿದ ಪಾರ್ವತಿ (2)
6) ಪಾಲನೆ 'ಕ್ಷಾರ'ದ ವಿರೋಧಿ (2)
8) 'ಒಳ್ಳೆಯ ನಗುವುಳ್ಳವಳು' (4)
9) ಮಕ್ಕಳಿಗೆ ಖುಷಿ ಕೊಡುವ ಸೂಟಿ (2)
10) ಕರ್ನಾಟಕದ ಹತ್ತಿರದ ರಾಜ್ಯದವ (4)
11) ಆಂಗ್ಲರ ಕ್ಷಮೆ ತಿರುಗಿದೆ (2)
12) ಪ್ರೇಮದ ಇನ್ನೊಂದು ಹೆಸರು (2)
13) ಭರದಿಂದ ಕೂಡಿದ್ದ ಹಿಂದಿನೊಬ್ಬ ರಾಜ (3)
14) ಬಯಸಿದ್ದನ್ನು ಕೊಡುವವ (3)

**ಜೀವನವೇ ಭಗವಂತನ ಪೂಜಾರೂಪವಾದ ಯಜ್ಞವಾಗಲಿ**